Swabhimani Sahakari
Pages : 30 / 12₹

# ಸ್ವಾಭಿಮಾನಿ ಸಹಕಾರಿ

Volume - 18
Issue - 03
March - 2021

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



ತನು ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ
ಗಂಧಾಕ್ಷತೆಯನೊಲ್ಲೆಯಯ್ಯಾ ನೀನು
ಅರಿವು ಕಣ್ದೆರೆಯದವರಲ್ಲಿ
ಆರತಿಯನೊಲ್ಲೆಯಯ್ಯಾ ನೀನು

–ಅಕ್ಕಮಹಾದೇವಿ



ಆಕಾಶದ ನೀಲಿಯಲ್ಲಿ
ಚಂದ್ರ ತಾರೆ ತೊಟ್ಟಿಲಲ್ಲಿ
ಬೆಳಕನಿಟ್ಟು ತೂಗಿದಾಕೆ
ನಿನಗೆ ಬೇರೆ ಹೆಸರು ಬೇಕೇ
ಸ್ತ್ರೀ ಎಂದರೆ ಅಷ್ಟೇ ಸಾಕೆ

– ಜಿ. ಎಸ್. ಶಿವರುದ್ರಪ್ಪ




▷ ಮಾರ್ಚ್..8
ಅಂತರರಾಷ್ಟ್ರೀಯ ಮಹಿಳಾ ದಿನ
▷ಮಾರ್ಚ್..11
ಮಹಾಶಿವರಾತ್ರಿ
▷ಮಾರ್ಚ್..28
ಹೋಳಿ ಹುಣ್ಣಿಮೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5178

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1359

# ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರ ಹಾಗೂ ಮುಖ್ಯಕಾರ್ಯನಿರ್ವಾಹಕರ ಕಾರ್ಯಾಗಾರ ಯಶಸ್ವಿ. ಸಹಕಾರಿ ತತ್ವಗಳ ಅನುಷ್ಠಾನಕ್ಕೆ ಧಕ್ಕೆಯಾಗದಂತೆ ಆರ್.ಬಿ.ಐ ಹಾಗೂ ಕೇಂದ್ರದ ನಡೆ ಅಗತ್ಯ.



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಇಷ್ಟೊಂದು ಬೃಹತ್ ಪ್ರಮಾಣದ ಸಹಕಾರಿ ಕ್ಷೇತ್ರ, ಸಹಕಾರಿ ಕ್ಷೇತ್ರವನ್ನೇ ಮೆಟ್ಟಲಾಗಿ ಬಳಸಿಕೊಂಡು ಸರಕಾರದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದವರು, ಸಂಸದರು, ಶಾಸಕರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ, ಸಾಕಷ್ಟು ಅನುಭವವಿರುವ ಸಹಕಾರಿ ನಾಯಕರು ನಮ್ಮಲ್ಲಿದ್ದಾಗ್ಯೂ ಸಹಕಾರಿಗಳಾದ ನಾವು ಸಂಕಷ್ಟದಲ್ಲಿರುವುದು ಆಗತ್ತಿರುವ ತೊಂದರೆಗಳನ್ನು ಯಾರಲ್ಲಿ ಎಷ್ಟೆ ಹೇಳಿಕೊಂಡರೂ ಪ್ರಯೋಜನ ಕಾಣದೇ ಇರುವುದು ಸಹಕಾರಿ ಕ್ಷೇತ್ರ ದೊಡ್ಡ ಅಪಾಯದ ಅಂಚಿನಲ್ಲಿರುವುದೇನೋ ಎಂಬ ಭಾವನೆ ಬೆಳೆಯಲು ಕಾರಣವಾಗಿರುವುದಂತೂ ಸತ್ಯ.

**ಆತ್ಮೀಯರೆ,**

ರಾಜ್ಯದ ಎಲ್ಲ ಸಹಕಾರಿಗಳಿಗೆ ಮಹಾಶಿವರಾತ್ರಿಯ ಹಾಗೂ ಹೋಳಿ ಹಬ್ಬದ ಶುಭಾಶಯಗಳು. ಎಲ್ಲ ಸಹಕಾರಿಗಳಿಗೆ ಶಿವಪರಮಾತ್ಮನು ಸಕಲ ಸಂಪತ್ತುಗಳನ್ನು ಕರುಣಿಸಲಿ ಸುಖ ಶಾಂತಿ ನೆಮ್ಮದಿಗಳನ್ನು ದಯಪಾಲಿಸಲಿ ಎಂದು ಆಶಿಸುತ್ತೇನೆ. ಸಹಕಾರಿ ಬಂಧುಗಳೇ ಇತ್ತೀಚಿನ ದಿನಗಳಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಕಾನೂನುಗಳ ತಿದ್ದುಪಡಿ, ಸರಕಾರದ ಧೋರಣೆಗಳು, ರಿಸರ್ವ್ ಬ್ಯಾಂಕಿನ ನಡೆ ಇವು ಬೆಳವಣಿಗೆಯ ವಾತಾವರಣ ಸೃಷ್ಟಿಯಾಗದೇ ದಿನೇ ದಿನೇ ಸಹಕಾರಿ ಮುಖಂಡರುಗಳಲ್ಲಿ ಆತಂಕಗಳೇ ಹೆಚ್ಚುತ್ತಿರುವುದು ವಿಷಾದನೀಯ.

ಇಷ್ಟೊಂದು ಬೃಹತ್ ಪ್ರಮಾಣದ ಸಹಕಾರಿ ಕ್ಷೇತ್ರ, ಸಹಕಾರಿ ಕ್ಷೇತ್ರವನ್ನೇ ಮೆಟ್ಟಲಾಗಿ ಬಳಸಿಕೊಂಡು ಸರಕಾರದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದವರು, ಸಂಸದರು, ಶಾಸಕರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ, ಸಾಕಷ್ಟು ಅನುಭವವಿರುವ ಸಹಕಾರಿ ನಾಯಕರು ನಮ್ಮಲ್ಲಿದ್ದಾಗ್ಯೂ ಸಹಕಾರಿಗಳಾದ ನಾವು ಸಂಕಷ್ಟದಲ್ಲಿರುವುದು ಆಗತ್ತಿರುವ ತೊಂದರೆಗಳನ್ನು ಯಾರಲ್ಲಿ ಎಷ್ಟೆ ಹೇಳಿಕೊಂಡರೂ ಪ್ರಯೋಜನ ಕಾಣದೇ ಇರುವುದು ಸಹಕಾರಿ ಕ್ಷೇತ್ರ ದೊಡ್ಡ ಅಪಾಯದ ಅಂಚಿನಲ್ಲಿರುವುದೇನೋ ಎಂಬ ಭಾವನೆ ಬೆಳೆಯಲು ಕಾರಣವಾಗಿರುವುದಂತೂ ಸತ್ಯ.

ಈ ವಿಪರ್ಯಾಸಕ್ಕೆ ಅಂತ್ಯ ಹಾಡುವುದು ಸಹಕಾರಿಗಳಿಂದಲೇ ಸಾಧ್ಯ. ಅಧಿಕಾರದಲ್ಲಿರುವವರನ್ನು ಸಂಸದರನ್ನು, ಶಾಸಕರನ್ನು ಸಂಬಂಧಿಸಿದ ಸಚಿವರನ್ನು ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚೆಮಾಡಿ ಸಮಸ್ಯೆಗಳ ಮನವರಿಕೆ ಮಾಡಿ ಪರಿಹಾರ ಸಿಗುವವರೆವಿಗೂ ಸಾಮೂಹಿಕವಾಗಿ ಕಾರ್ಯಾಚರಣೆ ಮಾಡುವ ಅನಿವಾರ್ಯತೆ ಈಗ ಹೆಚ್ಚಿದೆ. ವಿಶೇಷವಾಗಿ ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರದಲ್ಲಿ ಇತ್ತೀಚಿನ ಬ್ಯಾಂಕಿಂಗ್ ಕಾಯ್ದೆಯ ತಿದ್ದುಪಡಿಯಿಂದಾಗಿ ಹಾಗೂ ಸ್ಮಾಲ್ ಫೈನಾನ್ಸ ಬ್ಯಾಂಕುಗಳ ಅಸ್ತಿತ್ವದಿಂದ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಈ ಸ್ಮಾಲ್ ಬ್ಯಾಂಕುಗಳಾಗಿ ಪರಿವರ್ತನೆಯಾಗುವುದಕ್ಕೆ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಇವೆಲ್ಲವುಗಳು ಸಹಕಾರಿ ತತ್ವಗಳಿಗೆ ವ್ಯತಿರಿಕ್ತವಾಗುತ್ತವೆ ಸಹಕಾರಿ ಕ್ಷೇತ್ರ ಅಳಿವಿನ ಅಂಚಿನತ್ತ ಧಾವಿಸುತ್ತಿದೆ ಏನೋ ಎಂಬ ಆತಂಕ ಸಹಜವಾಗಿ ಮೂಡುತ್ತದೆ.

ಕೇಂದ್ರ ಸರಕಾರ ಹಾಗೂ ಆರ್.ಬಿ.ಐ ನವರು ಸಹಕಾರ ತತ್ವಗಳ ಬಗ್ಗೆ ಅವುಗಳ ಅನುಷ್ಠಾನದ ಬಗ್ಗೆ ಸಹಕಾರ ಕ್ಷೇತ್ರದ ಸಾಧನೆಗಳ ಬಗ್ಗೆ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಹಕಾರಿಗಳ ಬಗ್ಗೆ ಈ ಕ್ಷೇತ್ರದ ಫಲಾನುಭಾವಿಗಳ ಬಗ್ಗೆ ಗಮನ ಹರಿಸುವುದು ಅಗತ್ಯ. ನೂರಾರು ವರ್ಷಗಳ ಇತಿಹಾಸವಿರುವ ಈ ಸಹಕಾರ ಕ್ಷೇತ್ರವನ್ನು ಸರಕಾರದ ಅನೇಕ ಯೋಜನೆಗಳನ್ನು ಜಾರಿಮಾಡಲು ಸಾಧನವಾಗಿರುವ ಈ ಸಹಕಾರಿ ಕ್ಷೇತ್ರವನ್ನು ಪ್ರಸಕ್ತ ಅಧಿಕಾರದಲ್ಲಿದ್ದವರು ಹಗುರವಾಗಿ ಕಾಣದೆ ವ್ಯವಸ್ಥೆಯನ್ನು ಭದ್ರಪಡಿಸಲು ಕ್ರಮ ತೆಗೆದುಕೊಳ್ಳಬೇಕೆ ವಿನಃ ಯಾವುದೋ ಸುಳಿವಿಗೆ ಸಿಕ್ಕು ಯಾವುದೋ ವ್ಯಯಕ್ತಿಕ ವಿಷಯಗಳ ಸಾಧನೆಗಳಿಗಾಗಿ ಇಡೀ ವ್ಯವಸ್ಥೆಯನ್ನು ಹಾಳುಮಾಡುವ ಕ್ರಮ ಸಲ್ಲದು. ಸಹಕಾರಿ ಕ್ಷೇತ್ರದ ಉಳಿವಿಗಾಗಿ ಕೇಂದ್ರದ ಹಾಗೂ ಆರ್.ಬಿ.ಐ ನಡೆ ಇರಬೇಕೆಂಬುದು ಸಹಕಾರಿಗಳ ಸ್ಪಷ್ಟ ಅಭಿಪ್ರಾಯ. ಈ ಬಗ್ಗೆ ಸಲ್ಲಿಸಿರುವ ಮನವಿ ಪತ್ರಗಳನ್ನೊಮ್ಮೆ ವಿಮರ್ಶಿಸಿ ಮನವಿಗಳನ್ನು ಪರಿಗಣಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸುವಿರಾಗಿ ಆಶಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ................................................ 5-13
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ................................................ 14-20
ಆರ್.ಬಿ.ಐ ಸುತ್ತೋಲೆ ........................... 21
**ಲೇಖನಗಳು :**
ಮಹಿಳೆಯರ ಸಬಲೀಕರಣ ಮತ್ತು ಪ್ರಸ್ತುತ ಸವಾಲುಗಳು .................... 22-23
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-II) ................................. 29-30

# ಸಂಪಾದಕೀಯ

## ಮಹಿಳಾ ಸಬಲೀಕರಣ ನಿರಂತರ ಪ್ರಕ್ರೀಯೆ

ಪ್ರತಿ ವರ್ಷ ಮಾರ್ಚ್ 8ನೇ ತಾರೀಖು ಮಹಿಳೆಯರ ಸಬಲೀಕರಣದ ಬಗ್ಗೆ ಚಿಂತನೆಯನ್ನು ನಡೆಸುವ ಬಗ್ಗೆ ಅಂತರರಾಷ್ಟ್ರ ಮಟ್ಟದಲ್ಲಿ ವಿಶ್ವ ಸಂಸ್ಥೆಯವರು ಕರೆ ನೀಡುತ್ತಿರುವುದು, ಅದಕ್ಕನುಗುಣವಾಗಿ ಎಲ್ಲ ದೇಶಗಳ ಎಲ್ಲ ರಾಜ್ಯಗಳಲ್ಲಿ ಈ ದಿನವನ್ನು ಪರಿಣಾಮಕಾರಿಯಾಗಿ ಆಚರಿಸಲಾಗುತ್ತಿದೆ. 1975 ರಿಂದ ಈ ಪ್ರಕ್ರೀಯೆ ಜಾರಿಯಲ್ಲಿದೆ. ಪರಿಣಾಮವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮಹಿಳೆಗೆ ಅವಕಾಶಗಳು ಸಾಮಾನ್ಯವಾಗಿ ಹಾಗೂ ಮೀಸಲಾತಿ ಮೂಲಕವಾಗಿಯಾದರೂ ದೊರಕುತ್ತಿರುವುದು ಸಮಾಧಾನಕರವಾಗಿದೆ. ಅನಾದಿ ಕಾಲದಿಂದ ಮಹಿಳೆಯು ಶೋಷಿತಳು. ಅವಳು ಮಕ್ಕಳನ್ನು ಹೆತ್ತುಕೊಡುವುದು ಹಾಗೂ ಕುಟುಂಬ ಪಾಲನೆ ಮಾಡುವುದು ನಾಲ್ಕು ಗೋಡೆಯ ಮಧ್ಯದಲ್ಲಿಯೇ ಅವಳ ಸಾಮ್ರಾಜ್ಯವೆಂಬ ಮಾತಿಗೆ ಇಂದು ಅಂತ್ಯ ಹಾಡಲಾಗುತ್ತಿದೆ. ರಾಜಕೀಯವಾಗಿ ಮಹಿಳೆಗೆ ಗ್ರಾಮಮಟ್ಟದಿಂದ ರಾಷ್ಟ್ರ ಮಟ್ಟದ ವರೆಗೆ ಹಲವು ಅವಕಾಶಗಳು ಲಭ್ಯವಾಗುತ್ತಿರುವುದನ್ನ ಗಮನಿಸಬಹುದು. ಹಲವಾರು ಉನ್ನತ ಹುದ್ದೆಗಳನ್ನು ಮಹಿಳೆಯರು ಅಲಂಕರಿಸುತ್ತಿರುವುದು ಸಂತೋಷದ ಹಾಗೂ ಹೆಮ್ಮೆಯ ವಿಷಯ. ಅದೇ ರೀತಿ ಶೈಕ್ಷಣಿಕ ಕ್ಷೇತ್ರದಲ್ಲಿ, ಆರೋಗ್ಯ, ಉದ್ಯಮ, ಸಹಕಾರ, ಸಾಮಾಜಿಕ ಇಂದು ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಸಬಲೀಕರಣರಾಗಿರುವುದನ್ನು ಸಮಾಜ ಒಪ್ಪಿಕೊಳ್ಳಲೇಬೇಕು.

ಪ್ರತಿ ವರ್ಷದ ಮಹಿಳಾ ದಿನಾಚರಣೆ ಮಹಿಳೆಯರ ಸಬಲೀಕರಣದ ವಿಷಯದಲ್ಲಿ ಜ್ಞಾಪನಾ ಕಾರ್ಯವಿದ್ದಂತೆ. ಈ ಕಾರ್ಯ ಯಾವುದೇ ಒಂದು ಅವಧಿಗೆ ಸೀಮಿತವಾಗುವುದಿಲ್ಲ. ಇದೊಂದು ನಿರಂತರ ಪ್ರಕ್ರೀಯೆಯಾದಾಗ ಮಾತ್ರ "ಪುರುಷ ಪ್ರಧಾನ ಸಮಾಜ" ಎಂಬ ಮಾತು ಕಡಿಮೆಯಾಗುತ್ತ ಹೋಗುತ್ತದೆ. "ಗೃಹಿಣಿಂ ಗೃಹಂ ಉಚ್ಚತೆ" ಎಂಬ ಮಾತು ಸತ್ಯವಾಗಿರುವುದನ್ನು ಸಾಬೀತು ಪಡಿಸಿ ದಂತಾಗುತ್ತದೆ. ಸಮಾಜದ ಆರೋಗ್ಯ ಸುಧಾರಿಸುತ್ತದೆ.

ಒಬ್ಬ ಮಹಿಳೆಗೆ ಶಿಕ್ಷಣ ಅಥವಾ ಸಾಮಾಜಿಕ ಮತ್ತು ರಾಜಕೀಯ ಸ್ಥಾನಮಾನಗಳು ಲಭಿಸಿದರೆ ಅದರ ಪ್ರಯೋಜನ ಇಡೀ ಸಮಾಜಕ್ಕೆ ಸಿಗುತ್ತದೆ. ಕೇವಲ ಒಂದೆರಡು ಕುಟುಂಬಗಳಿಗೆ ಸೀಮಿತವಾಗುವುದಿಲ್ಲ. ಮಹಿಳೆಯರಿಗೆ ಅನುಕಂಪ ತೋರಿಸುವ ಬದಲಿಗೆ ಅವಕಾಶಗಳನ್ನು ಒದಗಿಸಿದಲ್ಲಿ ಮಹಿಳಾ ಸಬಲೀಕರಣ ಎನ್ನುವುದಕ್ಕೆ ಅರ್ಥ ಬರುತ್ತದೆ. ಆದ್ದರಿಂದ ಮಹಿಳಾ ಸಬಲೀಕರಣ ನಿರಂತರ ಪ್ರಕ್ರೀಯೆಯಾಗಲು ಸರಕಾರಗಳು, ಸಂಸ್ಥೆಗಳು, ಎಲ್ಲ ಸಮಾಜದ ಎಲ್ಲ ವರ್ಗದ ಜನರು ಕೈಜೋಡಿಸುವುದು ಅಗತ್ಯ.

## “ಕಣ್ಣಿದುರಿಗಿರುವವರೆಲ್ಲಾ ಕೈಬಿಟ್ಟಾಗ ಕಾಣದವನೊರ್ವ ಕೈ ಹಿಡಿಯುತ್ತಾನೆ”

ಶ್ರೇಣಿ 59



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರು, ಬೆಂಗಳೂರು.

ಶತಶತಮಾನಗಳು ಮನುಕುಲದ ಇತಿಹಾಸವನ್ನು ಪರಶೀಲಿಸುತ್ತಾ ಹೊರಟಾಗ ಮಾನವನ ಏಳಿಗೆಗೆ ಅಥವಾ ಅವನ ಅವನತಿಗೆ ಆತನ ಆಯ್ಕೆಗಳೇ ಮೂಲಕಾರಣವೆಂದು ನಮ್ಮ ಋಷಿಮುನಿಗಳು. ಸಂತರು ಹಾಗೂ ಚಿಂತನ ಶೀಲರುಗಳು ತಿಳಿಸುತ್ತಾ ಬಂದಿದ್ದು ಉತ್ತಮ ಆಯ್ಕೆಗಳಿಂದ ಬದುಕಿನ ಔನ್ನತ್ಯವನ್ನು ಸಾಧಿಸಬೇಕೆಂದು ನಿರ್ದೇಶನವಿತ್ತಿರುತ್ತಾರೆ. ಆಯ್ಕೆಗಳ ಪ್ರಾಮುಖ್ಯತೆಯನ್ನು ಮನ್ನಿಸಿ ಸದ ಆಯ್ಕೆಗಳನ್ನು ಅರಸಿದಲ್ಲಿ ಬಾಳಯಾಸ ಸುಸೂತ್ರವೆಂಬ ಅಂಶ ಸರ್ವವೇದ್ಯ.

ಧರ್ಮನಿರತರಾದ ನಮ್ಮ ಪೂರ್ವಿಕರು ಪೂಜೆ, ಜಪ. ತಪ, ದೈವ ಚಿಂತನೆಗಳನ್ನು ತಮ್ಮ ಜೀವನದ ಅವಿಭ್ಯಾಜ್ಯ ಅಂಗಗಳನ್ನಾಸಿಕೊಂಡಿದ್ದರ ಕಾರಣ ಅವರ ಜೀವನ ಸುಖ ಶಾಂತಿಗಳಿಂದ ಕೂಡಿದ ಸಮುದ್ರದಂತಿತ್ತು. ಆದರೆ ಇಂದಿನ ತಾರಕದ ನಾವುಗಳು ದೈವ ಚಿಂತನ, ಜಪತಪಗಳಿಂದ ದೂರವಾಗುತ್ತಿರುವ ಕಾರಣ ನಮ್ಮ ಬುದುಕು ಸಂಘರ್ಷಕ್ಕೊಳಗಾಗಿ ಅಶಾಂತಿ ಅಸೂಯೆಗಳ ಆಗರವಾಗಿದೆಯೆಂದು ಇದನ್ನು ಸರಿಪಡಿಸಲು ಯೋಗ್ಯಮಾರ್ಗವಾದ ದೈವ ನಿರ್ದೇಶನಗಳನ್ನು ಪಾಲಿಸಲಿ ನಿರ್ದೇಶನ ನೀಡುವ ಡಿ.ವಿ.ಜಿ ಯವರ ಪದ್ಯ ಈ ಕೆಳಗಿನಂತಿದೆ.

ಹೊನ್ನೆಂದು ಜಗದಿ ನೀಂ, ಕೈಗೆ ಕೊಂಡುದನು ವಿಧಿ
ಮಣ್ಣೆನುವನ್: ಅವನ ವರ ಮಣ್ಣೆನುವೆ ನೀನು
ಚಿನ್ನವಿಂತಿಕೆ ವಸ್ತು ಮೌಲ್ಯಗಳ ಗಣನೆಯೇ
ಪದ್ಯಕ್ಕೆ ಗತಿಯೆಂತೋ ॥ ಮಂಕುತಿಮ್ಮ ॥

ನಾವು ಚಿನ್ನವೆಂದು ಭಾವಿಸಿದ ವಸ್ತು ಮಣ್ಣಾಗಿ ಏನೂಬೆಲೆಯಿಲ್ಲದ ವಸ್ತುವಾಗುತ್ತದೆ. ಆದರೆ ವಿಧಿಯ ನಮಗೆ ಕೊಟ್ಟವರ ಅದು ಚಿನ್ನವಾಗಿದ್ದರೂ ನಮಗೆ ಮಣ್ಣಿನಂತೆ ಬಾಸವಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಕುರುಕ್ಷೇತ್ರ ಯುದ್ಧ ಪೂರ್ವದಲ್ಲಿ ಸಮರ ಏರ್ಪಟ್ಟಾಗ ಯಾದವ ಸೈನ್ಯದ ಬಲವನ್ನು ಕೋರಲು ಶ್ರೀ ಕೃಷ್ಣನಲ್ಲಿಗೆ ದುರ್ಯೋಧನನ ಮತ್ತು ಅರ್ಜುನರುಗಳು ಬರುತ್ತಾರೆ. ಆದರೆ ಆಯ್ಕೆಯನ್ನು ಮಂಡಿಸುವ ಅವಕಾಶ ಅರ್ಜುನನಿಗೆ ಬಂದಾಗ ದೈವ ಪ್ರೇಮಿಯಾದ ಅರ್ಜುನನು ಸೈನ್ಯವಿಲ್ಲದ ಏಕಾಂಗಿಯಾದ ಶ್ರೀ ಕೃಷ್ಣನನ್ನೇ ತನಗಿರಲೆಂದು ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ ಅದೇ ದುರ್ಯೋಧನ ತನಗೆ ಯಾದವ ಸೈನ್ಯದ ಬಲ ದೊರೆಯಿತೆಂದು ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ ಅದೇ ದುರ್ಯೋಧನ ತನಗೆ ಯಾದವ ಸೈನ್ಯದ ಬಲ ದೊರೆಯಿತೆಂದು ಹಂ ಹಂ ಹಿಗ್ಗುತ್ತಾನೆ. ಆದರೆ ಅಂತರ್ಯದಲ್ಲಿ ವಿಚಾರಮಾಡಿ ನೋಡಿದಾಗ ಲಾಭವಾದದ್ದು ಅರ್ಜುನನಿಗೆಂದು ತಿಳಿಯುತ್ತದೆ.

ದಾನಶೂರ, ಮಹಾಕಲಿ ಕರ್ಣ ಅದಷ್ಟೇ ಶೌರ್ಯಪರಾಕ್ರಮಗಳನ್ನು ಹೊಂದಿದ್ದರೂ ದುರ್ತ ದುರ್ಯೋಧನನಿಗೆ ಮಿತ್ರನಾದ ಕಾರಣ ದೈವಕೃಪೆ ವಂಚಿತನಾಗುತ್ತಾನೆ. ದೈವವನ್ನು ನಂಬಿ ತಮ್ಮ ಬಾಳನ್ನು ಬಂಗಾರ ಮಾಡಿಕೊಂಡವರಲ್ಲಿ ವಿಭೀಷನಾ ಪ್ರಹ್ಲಾದ, ಪಾಂಚಾಲಿ, ಗಜೇಂದ್ರ ಧೃವ ಮತ್ತು ಅಹಲ್ಯೆಯರ ಉದಾಹರಣೆಗಳು ನಮ್ಮ ಕಣ್ಮುಂದೆ ಸುಳಿಯುತ್ತವೆ.

ಆದ್ದರಿಂದ ಧರ್ಮಶಾಸ್ತ್ರಗಳ ನಿರ್ದೇಶನದನ್ವಯ ಒಳ್ಳೆಯದಾವುದೆಂಬುದನ್ನು ತಿಳಿದು ಒಳ್ಳೆಯ ಆಯ್ಕೆಯ ಮೂಲಕ ಬಾಳನ್ನು ಹಸನುಗೊಳಿಸಿಕೊಳ್ಳಿರೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು **15,994** ಆಗಿರುತ್ತದೆ. ಇವುಗಳ ಪೈಕಿ **8924** ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು **7,070.**

**ಫೆಬ್ರವರಿ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು **296,** ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು **487**

**ಅಮಲ್ಜಾರಿ ಪ್ರಕರಣಗಳು :** ಒಟ್ಟು **2,725** ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ **255** ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು **170** ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ **2,205** ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ **1022** ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ **103** ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು **477** ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ **442** ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಫೆಬ್ರವರಿ ತಿಂಗಳಿನಲ್ಲಿ **104** ಪ್ರಕರಣ ದಾಖಲಾಗಿರುತ್ತವೆ.



## ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರ ಭೇಟಿ

**ಬೆಂಗಳೂರು** : ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಸಮಸ್ಯೆಯಿಂದ ಆಗುತ್ತಿರುವ ತೊಂದರೆ ನಿವಾರಣೆ ಕುರಿತು ಮಾನ್ಯ ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಹೆಚ್. ಕೃಷ್ಣಾರೆಡ್ಡಿ ರವರು ಭೇಟಿ ಮಾಡಿ ಮನವಿ ಸಲ್ಲಿಸಿದರು.

## ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ 5ನೇ ತಂಡ ಯಶಸ್ವಿ ಮುಕ್ತಾಯ



### ಅಧ್ಯಕ್ಷ ಭಾಷಣ : ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು, ಸಂಯುಕ್ತ ಸಹಕಾರಿ ,ಬೆಂಗಳೂರು.

**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ ಸರ್ಟಿಫಿಕೇಟ್ ಕೋರ್ಸನ 5ನೇ ತಂಡದ ತರಬೇತಿ ದಿನಾಂಕ 01.02.2021 ರಿಂದ ಪ್ರಾರಂಭವಾಗಿ ದಿನಾಂಕ 07.02.2021 ಕ್ಕೆ ಯಶಸ್ವಿಯಾಗಿ ಮುಕ್ತಾಯವಾಯಿತು.

ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಿಬ್ಬಂದಿಯವರಿಗೆಲ್ಲ ಒಂದಲ್ಲ ಒಂದು ವಿಧವಾದ ತರಬೇತಿಯನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತ ಬಂದಿದೆ. ಇದುವರೆಗಿನ ತರಬೇತಿಗಳಲ್ಲಿ ಭಾಗವಹಿಸಿದ ಸಿಬ್ಬಂದಿಯವರು ತಾವು ಕಾರ್ಯನಿರ್ವಹಿಸುವ ಕ್ಷೇತ್ರದಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಸಂಸ್ಥೆಗೆ ಆಸ್ತಿಯಂತೆ ಇದ್ದಾರೆ. ನಿರಂತರ ತರಬೇತಿಯಿಂದ ಸಿಬ್ಬಂದಿಯವರ ಕಾರ್ಯಕ್ಷಮತೆ ಹೆಚ್ಚುತ್ತದೆ ಎಂದು ತಿಳಿಸಿದರು.

### ಪ್ರಶಸ್ತಿ ಪತ್ರ ವಿತರಣೆ : ಸದಾಶಿವರೆಡ್ಡಿ,

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿ ಸಂಘಗಳ ಕಾರ್ಯನಿರ್ವಹಣಾ ಸಾಮರ್ಥ್ಯ ಚೆನ್ನಾಗಿದೆಯಾದರೂ ಪ್ರತಿಯೊಬ್ಬ ಸಿಬ್ಬಂದಿಯವರು ನಿಷ್ಠೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುವುದರ ಜೊತೆಗೆ ಉತ್ತಮ ತರಬೇತಿ ಪಡೆದುದಾದರೆ ಸಂಸ್ಥೆಯ ಕಾರ್ಯಚಟುವಟಿಕೆಗಳು ಉತ್ತಮವಾಗಿಸಲು ಸಾಧ್ಯವಾಗುತ್ತದೆ. ಸಂಯುಕ್ತ ಸಹಕಾರಿಯವರು ರಾಜ್ಯದಾದ್ಯಂತ ಅನೇತ ರೀತಿಯ ತರಬೇತಿಗಳನ್ನು ಏರ್ಪಡಿಸುತ್ತ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟವನ್ನು ಸುಧಾರಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ ಹಾಗೂ ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಎಂದರು. ಜೊತೆಗೆ ಸಂಯುಕ್ತ ಸಹಕಾರಿಯ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡಿ ಸಂಯುಕ್ತ ಸಹಕಾರಿಯವರು ಇವುಗಳ ನಿವಾರಣೆಗೆ ಶ್ರಮಿಸುತ್ತಿದ್ದಾರೆ ನಾವು ನಿಮ್ಮಜೊತೆಗೆ ಇದ್ದೇವೆ ನೀವು ಮುಂದುವರೆಯಿರಿ ಎಂದು ತಿಳಿಸಿದರು.

### ಸಮಾರೋಪ ಭಾಷಣ : ಶ್ರೀ ಶರಣಗೌಡ ಜಿ. ಪಾಟೀಲ ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ ,ಬೆಂಗಳೂರು

7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸನ ಸಮಾರೋಪ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ರವರು ತರಬೇತಿ ಅತ್ಯಂತ ಶಿಸ್ತಿನಿಂದ ವ್ಯವಸ್ಥಿತವಾಗಿ ನಡೆದಿರುವುದು ಶಿಬಿರಾರ್ಥಿಗಳ ಅನಿಸಿಕೆಗಳಿಂದ ತಿಳಿದು ಬರುತ್ತದೆ. ಉತ್ತಮ ವಿಷಯಗಳ ಆಯ್ಕೆ ಹಾಗು ಉತ್ತಮ ನುರಿತ ಮತ್ತು ಪ್ರಚಲಿತ ಮಾಹಿತಿಗಳನ್ನು ಹೊಂದಿರುವ ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸಕಾರಿ ಭಾಗವಹಿಸಿರುವುದು ನಿಮ್ಮೆಲ್ಲರ ಸೌಭಾಗ್ಯ ಈ ತರಬೇತಿಯಿಂದ ನಿಮ್ಮಲ್ಲಿರುವ ಪ್ರತಿಭೆ ಸ್ಫೂಟಕವಾಗಿ ನೀವು ಪ್ರತಿನಿಧಿಸುತ್ತಿರುವ ಸಂಸ್ಥೆಗೆ ಹೆಚ್ಚಿನ ಲಾಭವಾಗಲಿ ಹಾಗೂ ವ್ಯಯಕ್ತಿಕವಾಗಿ ನಿಮ್ಮ ಜ್ಞಾನ ಹೆಚ್ಚಲಿ ಎಂದು ಆಶಿಸುತ್ತೇನೆ ಎಂದರು.

ಶಿಬಿರದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಎಸ್. ಎ.ಸಿದ್ಧಾಂತಿ, ಹಾಲಿ ಪ್ರಾಧ್ಯಾಪಕ ಡಾ.ಶಿವಪ್ರಕಾಶರವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶಿಬಿರಾಥಿಗಳಿಂದ ಪ್ರಾರ್ಥನೆ ಹಾಗೂ ಸ್ವಾಗತವಾದ ನಂತರ ಶಿಬಿರದ ವರದಿಯನ್ನು ಶಿಬಿರದ ಸಂಚಾಲಕ ಶ್ರೀ ಶಿವಕುಮಾರರವರು ಪ್ರಸ್ತುತ ಪಡಿಸಿದರು.

ಶಿಬಿರದಲ್ಲಿ ಸಕ್ರೀಯವಾಗಿ ಪಾಲ್ಗೊಂಡ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಯಿತು. ಶಿಬಿರಾರ್ಥಿಗಳೆಲ್ಲ ಸೇರಿ ಸಂಯುಕ್ತ ಸಹಕಾರಿಗೆ ಒಂದು ನೆನೆಪಿನ ಕಾಣಿಕೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ರವರಿಗೆ ನೀಡಿದರು. ಶಿಬಿರದ ಸಂಯೋಜಕರಿಂದ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

17 ವಿಷಯಗಳಿಗೆ ಸಂಬಂಧಿಸಿದಂತೆ 16 ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದರು. ಒಟ್ಟು ಶಿಬಿರದಲ್ಲಿ 6 ಬ್ಯಾಂಕುಗಳಿಂದ 50 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಶಿಬಿರದ ಅಂತ್ಯದಲ್ಲಿ ನಡೆಸಿದ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದವರ ವಿವರಗಳು.

ಪ್ರಥಮ ಶ್ರೀ ಮಹೇಶ್ ಖಂಡಿಮಠ, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, ರಾಯಚೂರು. ದ್ವಿತೀಯ ಶ್ರೀಲಕ್ಷ್ಮೀ ಶೆಟ್ಟಿ, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, ರಾಯಚೂರು. ತೃತೀಯ ವೈ. ಎನ್. ಸ್ವಪ್ನ, ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ. ಬೆಂಗಳೂರು.

ಒಟ್ಟಾರೆ ಶಿಬಿರಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ 21, ಉತ್ತಮ ಶ್ರೇಣಿಯಲ್ಲಿ 26, ಸಾಧಾರಣ ಶ್ರೇಣಿಯಲ್ಲಿ 3.



5ನೇ ತಂಡದ ಶಿಬಿರಾರ್ಥಿಗಳೊಂದಿಗೆ ಗಣ್ಯರು

## ಪಟ್ಟಣ ಸೌಹಾರ್ದ ಸಹಕಾರಿಗಳ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ 2 ದಿನಗಳ ಆಡಳಿತ ಪರಿಣಿತಿ ಕಾರ್ಯಾಗಾರ

### ಪ್ರಮುಖ ಭಾಷಣ – ಶ್ರೀ ಆರ್.ಗಾಂಧೀ, ಮಾಜಿ ಡೆಪ್ಯುಟಿ ಗವರ್ನರ, ರಿಸರ್ವ ಬ್ಯಾಂಕ್ ಆಫ್ ಇಂಡಿಯಾ ಕೇಂದ್ರ ಸರಕಾರದ ಹಾಗೂ ಆರ್.ಬಿ.ಐ ನಿಲುವುಗಳು ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಠೇವಣಿದಾರರ ಹಿತರಕ್ಷಣೆಯ ಧ್ಯೇಯ. ಸಹಕಾರಿ ತತ್ವಗಳಿಗೆ ಧಕ್ಕೆ ಇಲ್ಲ. ಆಡಳಿತ ಮಂಡಳಿಯವರು ಆತಂಕ ಪಡಬೇಕಾಗಿಲ್ಲ.




**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ 2 ದಿನಗಳ ವಿಶೇಷ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಾತನಾಡಿದ ಆರ್.ಬಿ.ಐ.ನ ಮಾಜಿ ಡೆಪ್ಯುಟಿ ಗವರ್ನರ್ ರವರು ಬ್ಯಾಂಕಿಂಗ ರೆಗ್ಯುಲೇಶನ್ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳು ಹಾಗು ಆರ್.ಬಿ.ಐ ನ ನಿರ್ದೇಶನಗಳು ಮತ್ತು ನಿಲುವು ದೇಶದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿನ ಠೇವಣಿದಾರರ ಹಿತರಕ್ಷಣೆ, ಬ್ಯಾಂಕುಗಳ ಗುಣಮಟ್ಟದ ಕಾರ್ಯನಿರ್ವಹಣೆಗೆ ಮತ್ತು ಆರೋಗ್ಯ ರಕ್ಷಣೆಯ ಧ್ಯೇಯವನ್ನು ಹೊಂದಿದೆ. ಇದಕ್ಕಾಗಿ ಪಟ್ಟಣ ಸಹಕಾರ ಬ್ಯಾಂಕುಗಳ ಪದಾಧಿಕಾರಿಗಳು ಆತಂಕಪಡಬೇಕಾದುದಿಲ್ಲ. ಸಹಕಾರಿ ತತ್ವಗಳ ಪಾಲನೆಗೆ ಯಾವ ತೊಂದರೆಯೂ ಇರುವುದಿಲ್ಲ. ಬ್ಯಾಂಕುಗಳ ಆಡಳಿತ ವೃತ್ತಿಪರವಾಗಿರಬೇಕು. ಇತ್ತೀಚಿನ ಎಲ್ಲ ಆಧುನಿಕ ತಾಂತ್ರಿಕ ವಿಧಾನಗಳನ್ನು ಅಳವಡಿಸುವುದು ಅಗತ್ಯ. ಅವುಗಳ ನಿರ್ವಹಣೆಯ ಜವಾಬ್ದಾರಿ ಆರ್.ಬಿ.ಐ ಮೇಲಿದೆ ಅದಕ್ಕಾಗಿ ಕಾಲಕಾಲಕ್ಕೆ ಅನುಗುಣವಾಗಿ ಅಗತ್ಯ ಮಾರ್ಗದರ್ಶನಗಳನ್ನು ನೀಡಲಾಗುತ್ತದೆ. ಬ್ಯಾಂಕಿಂಗ್ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳ ಅನುಷ್ಠಾನಕ್ಕಾಗಿ ಆರ್.ಬಿ.ಐ.ನ ಮಾಜಿ ಡೆಪ್ಯುಟಿ ಗವರ್ನರ ಶ್ರೀ ವಿಶ್ವನಾಥನ್ ಇವರ ನೇತೃತ್ವದಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿ ಪಟ್ಟಣ ಸಹಕಾರ ಬ್ಯಾಂಕುಗಳ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದರು.

**ಉದ್ಘಾಟನೆ : ಶ್ರೀ ಎಮ್.ಡಿ. ನರಸಿಂಹಮೂರ್ತಿ, ಮಾನ್ಯ ಜಂಟಿ ನಿಬಂಧಕರು, (ಕಾನೂನೂ ಕೋಶ) ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗ, ನಿಬಂಧಕರ ಕಛೇರಿ, ಬೆಂಗಳೂರು.**

ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಸಹಕಾರ ಸಂಘಗಳ ಜಂಟಿ ನಿಬಂಧಕ ಕಾನೂನು ಕೋಶ ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಶ್ರೀ ಎಮ್.ಡಿ. ನರಸಿಂಹಮೂರ್ತಿಯವರು ಕಾರ್ಯಕ್ರಮ ಉದ್ಘಾಟನೆ ಮಾಡಿ ಪಟ್ಟಣ ಸಹಕಾರ ಬ್ಯಾಂಕುಗಳ ಕಾರ್ಯನಿರ್ವಹಣೆ ಸಹಕಾರಿ ತತ್ವಗಳ ಆಧಾರದ ಮೇಲೆ ವಾಣಿಜ್ಯ ಬ್ಯಾಂಕುಗಳ ಕಾರ್ಯನಿರ್ವಹಣೆ ಕಾರ್ಪೋರೇಟ್ ತತ್ವಗಳ ಆಧಾರವಾಗಿರುವುದರಿಂದ ಪಟ್ಟಣ ಸಹಕಾರ ಬ್ಯಾಂಕುಗಳ ಕಾರ್ಯಾಚಟರಣೆಗೆ ಕೆಲವು ಅನುಕೂಲಗಳನ್ನು ಹಾಗೂ ರಿಯಾಯಿತಿಗಳನ್ನು ಆರ್.ಬಿ.ಐ ಒದಗಿಸುವುದು ಅವಶ್ಯಕ ಎಂದು ತಿಳಿಸಿದರು. ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಜಿಯಾ ಉಲ್ಲಾ ರವರ ಅನುಪಸ್ಥಿತಿಯಲ್ಲಿ ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ನರಸಿಂಹ ಮೂರ್ತಿಯವರು ಪಟ್ಟಣ ಸಹಕಾರ ಬ್ಯಾಂಕುಗಳು ಸ್ಥಳಿಯರು ಹಣಕಾಸಿನ ಅನುಕೂಲಕ್ಕಾಗಿ ಸಹಕಾರಿ ತತ್ವಗಳ ಆಧಾರದ ಮೇಲೆ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಕಟ್ಟಿಕೊಂಡಿರುವುದು. ಸೇವಾ ಮನೋಭಾವನೆ ಪ್ರಧಾನವಾಗಿದೆಯಾದರೂ ಲಾಭವೂ ಅಷ್ಟೆ ಪ್ರಧಾನವಾಗಿರುತ್ತದೆ. ಆದರೆ ವಾಣಿಜ್ಯ ಬ್ಯಾಂಕುಗಳ ಧ್ಯೇಯ ಪೂರ್ಣವಾಗಿ ಲಾಭವೇ ಆಗಿರುತ್ತದೆ. ಹೀಗಾಗಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು ನೋಡುವ ದೃಷ್ಟಿ ಬದಲಾವಣೆ ಅಗತ್ಯ ಇದೆ ಎಂದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಹಾಗೂ ಮಾಜಿ ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿಯವರು, ವಿಕಾಸ ಬ್ಯಾಂಕ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ವಿಶ್ವನಾಥ ಹಿರೇಮಠರವರು ಹಲವು ವಿಷಯಗಳ ಪ್ರಸ್ತಾವನೆ ವಿಶೇಷವಾಗಿ ಪಟ್ಟಣ ಸಹಕಾರ ಬ್ಯಾಂಕುಗಳು ಸ್ಮಾಲ್ ಫೈನಾನ್ಸ ಬ್ಯಾಂಕುಗಳಾಗಿ ಪರಿವರ್ತನೆಗೊಳ್ಳುವುದ-ರಿಂದ ಸಾಧಕ ಬಾಧಕಗಳ ಬಗ್ಗೆ ಪ್ರಸ್ತಾವನೆ ಮಾಡಿದರು.

**ಅಧ್ಯಕ್ಷ ಭಾಷಣ : ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು, ಸಂಯುಕ್ತ ಸಹಕಾರಿ ,ಬೆಂಗಳೂರು.**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಪಟ್ಟಣ ಸಹಕಾರಿ ಬ್ಯಾಂಕುಗಳ ಉತ್ತಮ ಕಾರ್ಯನಿರ್ವಹಣೆಯಲ್ಲಿ ಅಗತ್ಯವಾಗುವ ಶಿಕ್ಷಣ, ತರಬೇತಿ ಹಾಗೂ ಅಗತ್ಯ ಮಾರ್ಗದರ್ಶನಗಳನ್ನು ಪ್ರಾರಂಭದಿಂದಲೂ ನೀಡುತ್ತ ಬಂದಿದೆ. ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ ರೆಗ್ಯುಲೇಶನ್ ಕಾಯ್ದೆಗೆ ತಿದ್ದುಪಡಿಯಾಗಿರುವ ಹಿನ್ನೆಲೆಯಲ್ಲಿ ಅವುಗಳ ಆಧಾರದ ಮೇಲೆ ಆರ್.ಬಿ.ಐ ಕೆಲವು ಮಾರ್ಗಸೂಚಿಗಳನ್ನು ರಾಜ್ಯದ ಎಲ್ಲ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕುಗಳ ಅಧ್ಯಕ್ಷರು ನಿರ್ದೇಶಕರುಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಮಾಹಿತಿ ನೀಡುವ ಹಾಗೂ ಮುಂದಿನ ದಿನಗಳಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಅನುಸರಿಸಬಹುದಾದ ಮಾರ್ಗದ ಬಗ್ಗೆ ಪರಸ್ಪರ ವಿಷಯಗಳನ್ನು ಹಂಚಿಕೊಳ್ಳುವ ಹಾಗೂ ತಜ್ಞರಿಂದ ಮಾರ್ಗದರ್ಶನ ಪಡೆಯುವ ಕಾರ್ಯಾಗಾರ ಇದಾಗಿದೆ ಎಂದರು.

**ಸ್ವಾಗತ ಹಾಗೂ ಪ್ರಾಸ್ತಾವಿಕ : ಶ್ರೀ ಶರಣಗೌಡ ಜಿ. ಪಾಟೀಲ ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ ,ಬೆಂಗಳೂರು**

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲರವರು ಸ್ವಾಗತ ಮಾಡಿ ನಂತರದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ 20 ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ಅದಕ್ಕಾಗಿ ಅವರುಗಳಿಗೆ ಬೇಕಾಗುವ ಶಿಕ್ಷಣ ಹಾಗೂ ತರಬೇತಿ ಕಾರ್ಯಾಗಾರಗಳನ್ನು ಆಗಿಂದಾಗ್ಗೆ ಹಮ್ಮಿಕೊಳ್ಳಲಾಗುತ್ತಿದೆ. ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಉತ್ತಮ ಆಡಳಿತ ಮಂಡಳಿಯನ್ನು ಹೊಂದಿವೆ. ಉತ್ತಮ ಅಧಿಕಾರಿಗಳಿದ್ದಾರೆ ಅವರುಗಳಿಗೆ ಬ್ಯಾಂಕಿಂಗ್ ಕ್ಷೇತ್ರದ ಇತ್ತೀಚಿನ ವಿದ್ಯಾಮಾನಗಳನ್ನು ಪರಿಚಯಿಸುವ ಕಾರ್ಯಾಗಾರ ಇದಾಗಿದೆ.

ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್. ಆರ್.ಲಕ್ಷ್ಮೀಕಾಂತ ರೆಡ್ಡಿಯವರು, ಶ್ರೀ ತಿಮ್ಮಯ್ಯ ಶೆಟ್ಟಿಯವರು ಶ್ರೀ ನಂಜನಗೌಡರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 12 ಬ್ಯಾಂಕುಗಳಿಂದ 47 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಕನ್ಸೋರ್ಶಿಯಮ್ ಫೈನಾನ್ಸ ಬಗ್ಗೆ ಕೆನರಾ ಬ್ಯಾಂಕ ನಿವೃತ್ತ ಅಧಿಕಾರಿ ಶ್ರೀ ಜೆ.ಪಿ. ಸಾಹುಕಾರ ರವರು ಮತ್ತು ಬ್ಯಾಂಕಿಂಗ್ ತಜ್ಞ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಹಾಗೂ ಮಾಜಿ ಎಮ್.ಎಲ್.ಸಿ ಶ್ರೀ ಮನೋಹರ ಮಸ್ಕಿಯವರು ಬ್ಯಾಂಕಿಂಗ ರೆಗ್ಯುಲೇಶನ್ ಕಾಯ್ದೆಯ ಇತ್ತೀಚಿನ ತಿದ್ದುಪಡಿಯ ಹಿನ್ನೆಲೆಯಲ್ಲಿ "ಮರ್ಜರ ಬೈ ವಲಂಟರಿ ಮತ್ತು ಮೆಂಡೆಟರಿ ಮರ್ಜರ" ವಿಷಯದ ಬಗ್ಗೆ ಪ್ರಸ್ತಾವ ಮಾಡಿ ಸಾಧಕ ಬಾಧಕಗಳ ಬಗ್ಗೆ ವಿವರ ನೀಡಿದರು ಚರ್ಚೆಯ ನಂತರ ದಿನದ ಕಾರ್ಯಕ್ರಮ ಮುಕ್ತಾಯವಾಯಿತು.

ಎರಡನೇಯ ದಿನ ಬೆಳಿಗ್ಗೆ ಶ್ರೀ ಗಿರೀಶ ಟಿ.ಎಲ್. ಚಾರ್ಟರ್ಡ ಅಕೌಂಟೆಂಟ್ ಇವರಿಂದ "ಸೈಬರ್ ಸೆಕ್ಯುರಿಟಿ ಚಾಲೆಂಜಸ್ ಆಂಡ ಕಂಪ್ಲಾಯನ್ಸ ಆಫ್ ಆರ್.ಬಿ.ಐ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

### ಸಂವಾದ ಕಾರ್ಯಕ್ರಮ :

ನಂತರ ನಡೆದ ಸಂವಾದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆರ್.ಬಿ.ಐ. ನ ನಿವೃತ್ತ ಸಹಪ್ರಧಾನ ವ್ಯವಸ್ಥಾಪಕ ಶ್ರೀ ಕೆ.ಎಸ್.ಮಹದೇವಸ್ವಾಮಿಯವರು, ವಿಜಯಾ ಬ್ಯಾಂಕಿನ ನಿವೃತ್ತ ಅಧಿಕಾರಿ ಶ್ರೀ ವಿಠ್ಠಲಶೆಟ್ಟಿಯವರು, ಬ್ಯಾಂಕಿಂಗ ತಜ್ಞ ಹಾಗೂ ಸುಕೋ ಬ್ಯಾಂಕ ಸ್ಥಾಪಕ ಅಧ್ಯಕ್ಷ , ಮಾಜಿ ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿಯವರು, ವಿಕಾಸ ಬ್ಯಾಂಕ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ವಿಶ್ವನಾಥ ಚ. ಹಿರೇಮಠ ರವರು ಭಾಗವಹಿಸಿದ್ದರು. ಸಂವಾದಕಾರರಾಗಿ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ರಘುನಂದನ ಕಾರ್ಯನಿರ್ವಹಿಸಿದರು.

ಸಂವಾದದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಿಗಿರುವ ಸವಾಲುಗಳು, ಅವಕಾಶಗಳು ಮತ್ತು ಮುಂಬರುವ ದಿನಗಳಲ್ಲಿ ಈ ಬ್ಯಾಂಕುಗಳು ಅನುಸರಿಸಬಹುದಾದ ಮಾರ್ಗ ಇವುಗಳ ಬಗ್ಗೆ ಸುದೀರ್ಘವಾಗಿ ಚರ್ಚೆಗಳು ನಡೆದವು. ಈ ಚರ್ಚೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಲಕ್ಷ್ಮೀಕಾಂತ ರೆಡ್ಡಿಯವರು, ಶ್ರೀ ತಿಮ್ಮಯ್ಯಶೆಟ್ಟಿಯವರು, ಶ್ರೀ ನಂಜನಗೌಡರವರು, ಬೆಲ್ಲದ ಬಾಗೇವಾಡಿ ಬ್ಯಾಂಕಿನ ಅಧ್ಯಕ್ಷ ಶ್ರೀ ಪವನ ರಮೇಶ ಕತ್ತಿ , ಸುಕೋ ಬ್ಯಾಂಕಿನ ಅಧ್ಯಕ್ಷ ಶ್ರೀ ಮೋಹಿತ ಮಸ್ಕಿ ಹಲವಾರು ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ನಂತರ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಲಕ್ಷ್ಮೀಕಾಂತ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಾರೋಪ ಕಾರ್ಯಕ್ರಮ ನಡೆಯಿತು. ಕಾರ್ಯಾಗಾರದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಅಭಿಪ್ರಾಯಗಳಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರತಿನಿಧಿಗಳ ಪ್ರಶ್ನೆಗಳಿಗೆ ಹಾಗೂ ಸಲಹೆಗಳಿಗೆ ಸ್ಪಂದಿಸಿ ಅಗತ್ಯ ಉತ್ತರಗಳನ್ನು ನೀಡಿದರು.

ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆಯವರು ವಂದನಾರ್ಪಣೆ ಸಲ್ಲಿಸಿದರು.

## “3ನೇ ತಂಡದ “ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ“ (ಡಿ.ಸಿ.ಬಿ.ಎಮ್) ಪ್ರಥಮ ಸಂಪರ್ಕವರ್ಗ

### ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಭೋಧನೆ, ಉತ್ತಮ ವಿಷಯಗಳು, ಉತ್ತಮ ವ್ಯವಸ್ಥೆಗಳು : ಶಿಬಿರಾರ್ಥಿಗಳ ಅಭಿಪ್ರಾಯ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಪ್ರಾರಂಭಿಸಿರುವ ಡಿ.ಸಿ.ಬಿ.ಎಮ್ ಕೋರ್ಸನ 3ನೇ ತಂಡದ ಪ್ರಥಮ ಸಂಪರ್ಕವರ್ಗಗಳನ್ನು ಎರಡು ಹಂತದಲ್ಲಿ ನಡೆಸಲಾಯಿತು. ಪ್ರಥಮ ಹಂತದಲ್ಲಿ ದಿನಾಂಕ 20,21 ಫೆಬ್ರವರಿ 2021 ರಲ್ಲಿ ಬೆಂಗಳೂರು, ಬೆಳಗಾವಿ, ಮುಧೋಳ ಹಾಗೂ ಅಂಕೋಲಾಗಳಲ್ಲಿ ಎರಡನೇಯ ಹಂತದಲ್ಲಿ ದಿನಾಂಕ 27,28 ಫೆಬ್ರವರಿ 2021 ರಂದು ಶಿವಮೊಗ್ಗ, ಎಕ್ಸಂಬಾ, ಉಡುಪಿ ಹಾಗೂ ಗಂಗಾವತಿಗಳಲ್ಲಿ ನಡೆಸಲಾಯಿತು.

ಪ್ರತಿಯೊಂದು ಕೇಂದ್ರದ ಹಾಜರಾತಿ ವಿವರ ಬೆಂಗಳೂರು 59, ಬೆಳಗಾವಿ 46, ಮುಧೋಳ 51, ಅಂಕೋಲಾ 39, ಶಿವಮೊಗ್ಗ 42, ಎಕ್ಸಂಬಾ 37 ಗಂಗಾವತಿ 43, ಉಡುಪಿ 63, ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮತ್ತು ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವರವರು, ಬೆಳಗಾವಿಯಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ವೃತ್ತಿಪರ ನಿರ್ದೇಶಕರಾದ ಶ್ರೀ ಮಾರುತಿ ಲಕ್ಷ್ಮಣ ಪವಾರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್, ಬಾಗಲಕೋಟೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್, ಅಂಕೋಲಾದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಸರಸ್ವತಿ ಎನ್. ರವಿ, ಶಿವಮೊಗ್ಗದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರಸನ್ನಕುಮಾರ, ಎಕ್ಸಂಬದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಮಾರುತಿ ಲಕ್ಷ್ಮಣ ಪವಾರ, ಉಡುಪಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಹಾಗು ಗಂಗಾವತಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ವಿಶ್ವನಾಥ ಹಿರೇಮಠ ಹಾಗು ಶ್ರೀ ಶ್ರೀಧರ ಇವರುಗಳ ಜೊತೆಗೆ ಸಹಕಾರಿ ಇಲಾಖೆಯ ಅಧಿಕಾ–ರಿಗಳು ಸಂಸದ ಶ್ರೀ ಅಣ್ಣಾಸಾಹೇಬ ಜೊಲ್ಲೆ, ಕರ್ನಾಟಕ ಸರಕಾರದ ಮಹಿಳಾ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಶ್ರೀಮತಿ ಶಶಿಕಲಾ ಜೊಲ್ಲೆ, ಇವರು ಎಕ್ಸಂಬಾದಲ್ಲಿ ಸಂಸದ ಶ್ರೀ ಸಂಗಣ್ಣ ಕರಡಿಯವರು, ಶಾಸಕ ಶ್ರೀ ಪರಣ್ಣ ಮುನವಳ್ಳಿಯವರು ಮುಂತಾದ ಗಣ್ಯರು ಭಾಗವಹಿಸಿದ್ದರು.

ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಭೋಧನೆ, ಉತ್ತಮ ವಿಷಯಗಳು , ಉತ್ತಮ ವ್ಯವಸ್ಥೆಗಳು ಲಭ್ಯವಾಗಿದ್ದವು ಎಂದು ಶಿಬಿರಾರ್ಥಿಗಳ ಅಭಿಪ್ರಾಯವಾಗಿತ್ತು

ಡಿ.ಸಿ.ಬಿ.ಎಮ್. ಕೇಂದ್ರಗಳ ಸಂಚಾಲಕರಾಗಿ ಬೆಂಗಳೂರು ಶ್ರೀ ಸಂಜಯ ಕೋರಟಕರ ಬೆಳಗಾವಿ ಶ್ರೀ ಬಸವರಾಜ ಹೊಂಗಲ್, ಅಂಕೋಲಾ ಶ್ರೀ ಗಂಗಾರಾಮ, ಮುಧೋಳ ಶ್ರೀ ವಿ.ಜೆ.ಕಾರಕೂನ, ಶಿವಮೊಗ್ಗ ಶ್ರೀ ನಾರಾಯಣ ಹೆಗಡೆ, ಎಕ್ಸಂಬ ಶ್ರೀ ಶ್ರೀಕಾಂತ ಬರುವೆ, ಉಡುಪಿ ಶ್ರೀ ಗುರುಪ್ರಸಾದ, ಗಂಗಾವತಿ ಶ್ರೀ ರಾಜಶೇಖರ ಹೂಗಾರ, ಇವರುಗಳು ಕಾರ್ಯಕ್ರಮ ಸಂಯೋಜಕರಾಗಿ ಕಾರ್ಯನಿರ್ವಹಿಸಿದರು. ಎಲ್ಲ ತರಬೇತಿ ಕೇಂದ್ರಗಳಲ್ಲಿ ನಡೆದ ಕಾರ್ಯಕ್ರಮಗಳ ವ್ಯಾಪಕ ಪ್ರಚಾರ ನೀಡಲಾಯಿತು.



ಡಿ.ಸಿ.ಬಿ.ಎಂ ಬೆಂಗಳೂರು ಕೇಂದ್ರದ ಅಧ್ಯಯನ ಸಾಹಿತ್ಯ ಬಿಡುಗಡೆ



ಡಿ.ಸಿ.ಬಿ.ಎಂ ಬೆಳಗಾವಿ ಕೇಂದ್ರದ ಅಧ್ಯಯನ ಸಾಹಿತ್ಯ ಬಿಡುಗಡೆ



ಡಿ.ಸಿ.ಬಿ.ಎಂ ಮುಧೋಳ ಕೇಂದ್ರದ ಉದ್ಘಾಟನೆ



ಡಿ.ಸಿ.ಬಿ.ಎಂ ಅಂಕೋಲಾ ಕೇಂದ್ರದ ಅಧ್ಯಯನ ಸಾಹಿತ್ಯ ಬಿಡುಗಡೆ




ಡಿ.ಸಿ.ಬಿ.ಎಂ ಶಿವಮೊಗ್ಗ ಕೇಂದ್ರದ ಉದ್ಘಾಟನೆ



ಡಿ.ಸಿ.ಬಿ.ಎಂ ಎಕ್ಸಂಬಾ ಕೇಂದ್ರದ ಅಧ್ಯಯನ ಸಾಹಿತ್ಯ ಬಿಡುಗಡೆ



ಡಿ.ಸಿ.ಬಿ.ಎಂ ಉಡುಪಿ ಕೇಂದ್ರದ ಉದ್ಘಾಟನೆ



ಡಿ.ಸಿ.ಬಿ.ಎಂ ಗಂಗಾವತಿ ಕೇಂದ್ರದ ಅಧ್ಯಯನ ಸಾಹಿತ್ಯ ಬಿಡುಗಡೆ

## "ದಾವಾ ದಾಖಲಾತಿ ಹಾಗೂ ಸಾಲಾ ವಸೂಲಾತಿ ಪ್ರಕ್ರಿಯೆ" ಕುರಿತು ತರಬೇತಿ ಕಾರ್ಯಕ್ರಮ

**ಹಾಸನ :** ಹಾಸನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕ ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ತರಬೇತಿ ಕಾರ್ಯಕ್ರಮವನ್ನು ದಿನಾಂಕ 06 ಫೆಬ್ರವರಿ 2021 ಶನಿವಾರದಂದು ಬೆಳಗ್ಗೆ 10.00 ಗಂಟೆಗೆ ಸಹಕಾರ ಭವನ, ಹಾಸನ ಇಲ್ಲಿ ಆಯೋಜಿಸಲಾತ್ತು, ಸದರಿ ಸಭೆಯಲ್ಲಿ 42 ಸೌಹಾರ್ದ ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿದ್ದರು, ಸದರಿ ಸಭೆಯಲ್ಲಿ ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ಎಂಬ ವಿಷಯದ ಬಗ್ಗೆ ಶ್ರೀ ಬಲರಾಮ್, ಕಿರಿಯ ವ್ಯವಸ್ಥಾಪಕ, ದಾವಾ ಪಂಚಾಯಿತಿ ನ್ಯಾಯಾಲಯ ಬೆಂಗಳೂರು, ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ, ವಂದನಾರ್ಪಣೆ ಶ್ರೀ ಸಂತೋಷ್ ಕುಮಾರ್ ಎಂ.ಜೆ ಜಿಲ್ಲಾ ಸಂಯೋಜಕರು ಹಾಸನ ಇವರು ನೆರವೇರಿಸಿದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ




**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 16.02.2021ರಂದು ಮಂಗಳೂರಿನ ವಿಶ್ವಕರ್ಮ ಸಹಕಾರ ಬ್ಯಾಂಕಿನ ಸಭಾಂಗಣದಲ್ಲಿ ನಡೆದ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಬಿ. ಪ್ರವೀಣ್ ನಾಯಕ್ ಇವರು ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಕಾಲಘಟ್ಟದಲ್ಲಿ ಅಗತ್ಯವಿರುವ ವಿಷಯಗಳನ್ನು ಜೋಡಿಸಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಹಕಾರಿ ಸಂಸ್ಥೆಗಳ ಅಧ್ಯಕ್ಷರು/ನಿರ್ದೇಶಕರು ಮತ್ತು ಸಿಬ್ಬಂದಿಗಳಿಗೆ ತರಬೇತಿಯ ಅನಿವಾರ್ಯತೆ ಇದೆ. ಈ ರೀತಿಯ ವಿಷಯಾಧರಿತ ತರಬೇತಿಯಿಂದ ಪ್ರಯೋಜನ ಪಡೆದು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ದಕ್ಷಿಣ ಕನ್ನಡ ಒಕ್ಕೂಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಸುರೇಶ್ ರೈ ಇವರು ತರಬೇತಿ ಕಾರ್ಯಕ್ರಮದ ಮೂಲಕ ಸಹಕಾರಿ ಸಂಸ್ಥೆಯ ಪ್ರತಿನಿಧಿಗಳು ತಮ್ಮ ಅನುಭವವನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಈ ನಿಟ್ಟಿನಲ್ಲಿ ಈ ರೀತಿಯ ತರಬೇತಿ ಕಾರ್ಯಕ್ರಮಗಳು ಹೆಚ್ಚು ನಡೆಯಬೇಕು ಎಂದು ತಿಳಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ ಸಾಲ ಪತ್ರಗಳ ದಾಖಲಾತಿ ಮತ್ತು ದಾವಾ ದಾಖಲಾತಿ ಕುರಿತಂತೆ ವಕೀಲರಾದ ಶ್ರೀ ವಸಂತ ಅಡ್ಯಂತಾಯ, ಚಿನ್ನಾಭರಣದ ಸಾಲ ನೀಡಿಕೆಯಲ್ಲಿ ಗಮನಿಸಬೇಕಾದ ಅಂಶಗಳ ಕುರಿತು ದೈವಜ್ಞ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎಂ. ಅಶೋಕ್ ಶೇಟ್ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣಾ ಪ್ರಕ್ರಿಯೆ ಕುರಿತಂತೆ ಸಹಕಾರಿಗಳ ಲೆಕ್ಕಪರಿಶೋಧನಾ ಇಲಾಖೆಯ ಚುನಾವಣಾ ಶಾಖೆಯ ಪ್ರಥಮ ದರ್ಜೆ ಸಹಾಯಕರಾದ ಶ್ರೀ ನವೀನ್‌ಕುಮಾರ್ ಎಂ.ಎಸ್ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು.

**ವಿಜಯನಗರ :** ದಿನಾಂಕ 12.02.2021 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ವಿಜಯನಗರ ಜಿಲ್ಲೆಯ ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ಹರಪ್ಪನಹಳ್ಳಿ, ಕೂಡ್ಲಿಗಿ, ಮತ್ತು ಕೊಟ್ಟೂರು ತಾಲೂಕಿನ ಸೌಹಾರ್ದ ಸಹಕಾರಿಗಳಗೆ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರುಗಳಿಗೆ "ವಿಷಯಾಧಾರಿತ ತರಬೇತಿ"ಯನ್ನು ಹೋಟೆಲ್ ಮಲ್ಲಿಗೆ ಲಕ್ಷ್ಮೀ ಸರಸ್ವತಿ ಚಿತ್ರಮಂದಿರ ಹತ್ತಿರ ಹೊಸಪೇಟೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠರವರು ನೇರವರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಲಿಯಾಕತ ಅಲಿಯವರು ಆಗಮಿಸಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯೇಯ ಕುರಿತು ಉಪನ್ಯಾಸ ನೀಡಿದರು. ಬಳ್ಳಾರಿ ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ಇವರು ಸಂಯುಕ್ತ ಸಹಕಾರಿಯ ಸುತ್ತೋಲೆಯ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 51 ಸೌಹಾರ್ದ ಸಹಕಾರಿಗಳಿಂದ 72 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಳ್ಳಾರಿ :** ದಿನಾಂಕ 16.02.2021 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಗೆ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರುಗಳಿಗೆ "ವಿಷಯಾಧಾರಿತ ತರಬೇತಿ"ಯನ್ನು ಹೋಟೆಲ್ ರಾಯಲ್ ಪೋರ್ಟನಲ್ಲಿ ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಲಿಯಾಕತ ಅಲಿಯವರು ಆಗಮಿಸಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯೇಯ ಕುರಿತು ಉಪನ್ಯಾಸ ನೀಡಿದರು. ಬಳ್ಳಾರಿ ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ಇವರು ಸಂಯುಕ್ತ ಸಹಕಾರಿಯ ಸುತ್ತೋಲೆಯ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 31 ಸೌಹಾರ್ದ ಸಹಕಾರಿಗಳಿಂದ 43 ಪ್ರತಿನಿಧಿಗಳು ಭಾಗವಹಿಸಿದ್ದರು.




**ಮೈಸೂರು** : ಮೈಸೂರು, ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 24.02.2021 ಬುಧವಾರ ಬೆಳಿಗ್ಗೆ 10:30 ಗಂಟೆಗೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಮೈಸೂರು ಲೋಕಲ್ ಸೆಂಟರ್), ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಜಿ.ಆರ್. ವಿಜಯಕುಮಾರ್‌ರವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾರಾಯಣ ರಾವ್‌ರವರು, ಶ್ರೀ ವಾಗ್ದೇವಿ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನವೀನ್‌ರವರು, ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣ ಸೌಹಾರ್ದ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ್ ಹೆಬ್ಬಾರ್‌ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 48 ಸೌಹಾರ್ದ ಸಹಕಾರಿಗಳಿಂದ 65 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಹಾವೇರಿ** : ದಿನಾಂಕ 05 ಫೆಬ್ರವರಿ 2021 ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸಾಯಿ ರೆಸಿಡೆನ್ಸಿ, ಗ್ರೀನ್ ಕೋರ್ಟ್, ಹಾವೇರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ವಹಿಸಿದ್ದರು. ಉದ್ಘಾಟಕರಾಗಿ ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಮಾನ್ಯ ಉಪನಿರ್ದೇಶಕರಾದ ಶ್ರೀಮತಿ ಗಾಯತ್ರಿ ಕಕ್ಕಲಮೇಳಿ ಯವರು ಭಾಗವಹಿಸಿದ್ದರು.

---



## ಭಾವಪೂರ್ಣ ಶ್ರದ್ಧಾಂಜಲಿ

**ನಿವೃತ್ತ ನ್ಯಾಯಾಧೀಶ, ರಾಜ್ಯಪಾಲ, ಹಿರಿಯ ಸಮಾಜ ಚಿಂತಕ ಮತ್ತು ಸಹಕಾರಿ ಶ್ರೀ ರಾಮಾ ಜೋಯಿಸ್ ರವರ ನಿಧನಕ್ಕೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಸಮಸ್ತ ಸೌಹಾರ್ದ ಸಹಕಾರಿಗಳು ಶೋಕ ವ್ಯಕ್ತಪಡಿಸಿದ್ದಾರೆ ಮತ್ತು ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ.**

---

**ಕಲಬುರಗಿ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಪ್ರಾಂತೀಯ ಕಛೇರಿಯಲ್ಲಿ ಮುಖ್ಯ ನ್ಯಾಯಾಧೀಶರು ಹಾಗೂ ಹಿರಿಯ ಸಹಕಾರಿ ಧುರೀಣರಾದ ದಿವಂಗತ ಶ್ರೀ ರಾಮ್ ಜೋಯಿಸರವರಿಗೆ ಪ್ರಾಂತೀಯ ವ್ಯವಸ್ಥಾಪಕರ ಉಪಸ್ಥಿತಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಿವೃತ ನ್ಯಾಯಮುರ್ತಿ ಎ. ರಾಮಜೋಯಿಸರವರ ನಿಧಾನ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಿ ಪ್ರಾಂತೀಯ ವ್ಯವಸ್ಥಾಪಕರಾದ ರಾಜಶೇಖರ ಹೆಚ್ ರವರು ಮಾತನಾಡುತ್ತ ಕರ್ನಾಟಕದ ಸಾಮಾನ್ಯ ವ್ಯಕ್ತಿ ಎ. ರಾಮಜೋಯಿಸರವರು ಪಂಜಾಬ-ಹರ್‍ಯಾಣದ ಉಚ್ಚನ್ಯಾಲಯದ ಮುಖ್ಯನ್ಯಾಯಧೀಶರಾಗಿ ಹಾಗೂ ಜಾರ್ಖಂಡದ ರಾಜ್ಯಪಾಲರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸದರು ಶ್ರೀಯುತರು ಕರ್ನಾಟಕದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಜಾರಿಗೆ ತರಲು ಸಾಕಷ್ಟು ಪ್ರಯತ್ನ ಮಾಡಿದ್ದರಿಂದ ಸೌಹಾರ್ದ ಸಹಕಾರಿಯ ಚಳುವಳಿ ಕರ್ನಾಟಕದಲ್ಲಿ ಮಾದರಿ ಚಳುವಳಿಯಾಗಿ ಹೊರಹೊಮ್ಮಿದರು ಅದಲ್ಲದೆ ಸೌಹಾರ್ದ ಕಾಯ್ದೆಯಡಿಯಲ್ಲಿ ಮಿತಾಕ್ಷರದ ಕೃತರಾದ ವಿಜ್ಞೇಶ್ವರ ಹೆಸರಿನಲ್ಲಿ ಮರತೂರನಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಪ್ರಥಮ ಸೌಹಾರ್ದ ಸಹಕಾರಿ ಹುಟ್ಟಿ ಹಾಕಿ ಅದರ ಮುಖಾಂತರ ಹಲವು ಚಟುವಟಿಕೆ ಜರುಗಿಸಿ ವಿಜ್ಞೇಶ್ವರವರ ಪರಿಚಯವನ್ನು ಭಾರತದಲ್ಲಡೆ ಪಸರಿಸಿದರು ಇಂತಹ ಮುತ್ಸದಿ, ಸಹಕಾರಿ ಮಾರ್ಗದರ್ಶಕ ನಮ್ಮನೆಲ್ಲ ಅಗಲಿರುವುದು ತುಂಬ ದುಖಕರವಾಗಿದೆ ಅವರ ಕುಟುಂಬಕ್ಕೆ ದು:ಖ ಭರಿಸುವ ಶಕ್ತಿ ದೇವರಲ್ಲಿ ನೀಡಲಿ ಎಂದು ತಿಳಿಸಿದರು.

## ಕದಂಬ ಸೌಹಾರ್ದ ಸಹಕಾರಿಯ ಸಿಬ್ಬಂದಿಯವರಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



**ಉತ್ತರ ಕನ್ನಡ :** ದಿನಾಂಕ 13 ಫೆಬ್ರವರಿ 2021 ರಂದು ಕದಂಬ ಸೌಹಾರ್ದ ಸಹಕಾರಿ ನಿ., ಶಿರಸಿ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ ಸಹಯೋಗದೊಂದಿಗೆ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ ಶಿರಸಿಯ ಕದಂಬ ಸೌಹಾರ್ದ ಸಹಕಾರಿಯಲ್ಲಿ ಸಹಕಾರಿಯ ಸಿಬ್ಬಂದಿಗಳಿಗೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಕೃಷ್ಣ ಎಸಳೆಯವರು ಭಾಗವಹಿಸಿದ್ದರು.

ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ಎಸ್.ಜಿ.ಜೋಷಿ, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು (ನಿವೃತ್ತ) ಹಾಗೂ ವಕೀಲರು, ವ್ಯಾಜ್ಯಗಳ ಹೂಡುವ ವಿಧಾನಗಳ ಕುರಿತು ಶ್ರೀ ಮಹಾಂತಪ್ಪ ಹಾಗೂ ಶ್ರೀ ಶ್ರೀಧರ ಮಾಟೊಳ್ಳಿ, ಮಾನ್ಯ ಅಧಿಕಾರಿಗಳು, ಸಂಯುಕ್ತ ಸಹಕಾರಿ, ಬೆಂಗಳೂರು, ತೆರಿಗೆ ವಿಷಯಗಳ ಕುರಿತು ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕ ಪರಿಶೋಧಕರು, ಸಾಗರ ಇವರು ಉಪನ್ಯಾಸಗಳನ್ನು ನೀಡಿದರು. ತರಬೇತಿಯಲ್ಲಿ ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಟೆಯವರು ಉಪಸ್ಥಿತರಿದ್ದರು.

## ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು



**ಬೆಳಗಾವಿ :** ದಿನಾಂಕ 23 ಫೆಬ್ರವರಿ 2021 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪೂರ, ಗೋಕಾಕ ಹಾಗೂ ಮೂಡಲಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು, ಮಾಹಾಂತ ಭವನ, ಮಹಾಂತೇಶ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರು ವಹಿಸಿದ್ದರು. ಅತಿಥಿಗಳಾಗಿ ಶಿವಾ ಕ್ರೆಡಿಟ್ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಸವರಾಜ ಸುಲ್ತಾನಪುರೆ ಇವರು ಭಾಗವಹಿಸಿದ್ದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರಿ ಶ್ರೀಕಾಂತ್ ಬರುವೆ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರಿಂದ ಉಪನ್ಯಾಸವನ್ನು ನೀಡಲಾಯಿತು.

ದಿನಾಂಕ 27 ಫೆಬ್ರವರಿ 2021 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ, ನಿಪ್ಪಾಣಿ, ಕಾಗವಾಡ, ರಾಯಬಾಗ, ಮತ್ತು ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಕೇಶವ ಕಲಾಭವನ, ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಎಸ್.ಜಿ.ಮಂಜುನಾಥ, ಮಾನ್ಯ ಪೀಠಾಧಿಕಾರಿಗಳು, ದಾವಾ ಪಂಚಾಯತ ನ್ಯಾಯಾಲಯ, ಬೆಂಗಳೂರು ಇವರು ವಹಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಮತ್ತು ಅತಿಥಿಗಳಾಗಿ ಶ್ರೀ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸಂಜಯ ಅಡಕೆಯವರು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ವಾಹನ ಮಾರಾಟಕ್ಕೆ ಇದೆ

ಸಂಯುಕ್ತ ಸಹಕಾರಿಯ ಈ ಕೆಳಕಂಡ 2 ವಾಹನಗಳು ಉತ್ತಮ ಸ್ಥಿತಿಯಲ್ಲಿ ಮಾರಾಟಕ್ಕೆ ಇದ್ದು ವಾಹನದ ವಿವರಗಳು ಈ ಕೆಳಗಿನಂತಿದೆ ಆಸಕ್ತರು ಸಂಯುಕ್ತ ಸಹಕಾರಿಗೆ ಸಂಪರ್ಕಿಸಿ ವಾಹನದ ವಿವರಗಳನ್ನು ಪಡೆದು ತಮ್ಮ ಖರೀದಿ ದರವನ್ನು ಖುದ್ದಾಗಿ ಲಿಖಿತವಾಗಿ ಆಥವಾ ಅಂಚೆ ಮೂಲಕ ದಿನಾಂಕ 20.03.2021 ರ ಒಳಗಾಗಿ ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಬಹುದು. ಸ್ವೀಕೃತವಾಗುವ ದರಪಟ್ಟಿಗಳನ್ನು ಪರಿಶೀಲಿಸಿ ಅಂತಿಮ ನಿರ್ಣಯವನ್ನು ಕೈಗೊಳ್ಳಲಾಗುವುದು.

| ಕ್ರ.ಸಂ | ವಾಹನದ ಮಾದರಿ | ಖರೀದಿ ದಿನಾಂಕ | ವಾಹನದ ವಿವರಗಳು | ಅಪೇಕ್ಷಿತ ಮಾರಾಟ ಮೊತ್ತ |
|---|---|---|---|---|
| 1 | ಇನ್ನೋವಾ 2.5 ವಿ–ಇ–4 | 01.07.2013 | 7 ಸೀಟರ್, ಸಿಲ್ಕಿಗೋಲ್ಡ್ | 8.15 ಲಕ್ಷ |
| 2 | ಎರಿಟಿಗಾ – ವಿಡಿಐ | 22.05.2014 | 7 ಸೀಟರ್, ಸಿಲ್ಕಿ ಸಿಲ್ವರ್ | 6.25 ಲಕ್ಷ |

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಪಾಲ್‌ರಾಜ್ ಎ : 8884466718 – ವೆಂಕಟೇಶ್ ನಾಯ್ಕ : 8884460280.**



**ವಿಜಯಪುರ :** ದಿನಾಂಕ 19 ಫೆಬ್ರವರಿ 2021 ರಂದು ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೋಟಲ್ ಶುಭಶ್ರೀ ಸಾಗರ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ ಇವರು ವಹಿಸಿದ್ದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರಿ ಶ್ರೀಕಾಂತ್ ಬರುವೆ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 113 ಸಹಕಾರಿಗಳಿಂದ 132 ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರು ಆದ ಶ್ರೀ ಶಿವಕಾಂತ ಎಸ್. ರವರು ಸಭೆಯನ್ನು ನಡೆಸಿದರು.

ದಿನಾಂಕ 20 ಫೆಬ್ರವರಿ 2021 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೋಟಲ್ ಶುಭಶ್ರೀ ಸಾಗರ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ ಇವರು ವಹಿಸಿದ್ದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರಿ ಶ್ರೀಕಾಂತ್ ಬರುವೆ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 92 ಸಹಕಾರಿಗಳಿಂದ 112 ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರು ಆದ ಶ್ರೀ ಶಿವಕಾಂತ ಎಸ್. ರವರು ಸಭೆಯನ್ನು ನಡೆಸಿದರು.


## SWABHIMANI SAHAKARI

### Form IV (See Rule-8)

| | | |
|---|---|---|
| 1. Place of Publication | : | **Bangalore, Karnataka** |
| 2. Periodicity of its Publications | : | **Monthly** |
| 3. Printer's Name | : | Shakthi Printech, # 552/1, 7th Cross, 3rd Main, Ayyappa Temple Road, Prakash Nagar, Srirampura, Bengaluru, Karnataka - 560021 |
| Whether Citizen of India | : | Yes |
| If foreigner, State the country of origin | | |
| 4. Editor's Name | : | **Sharangouda G. Patil** |
| Whether Citizen of India | : | Yes |
| If foreigner, State the country of origin | | |
| Address | : | Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010 |
| 5. Name and Address of individuals who own the Newspaper and partners or share holders holding more than percent of the total capital | : | Managing Director<br>Karnataka State Souharada Federal Co operative Ltd.,<br>Nirman Bhavan complex, Dr. Rajkumar Road,<br>1st Block, Rajajinagar, Bangalore-560 010 |

I, Sharangouda G. Patil here by declare that the particulars given above are true to the best of my knowledge and belief.

**Date : 28/02/2021** Sd/-

**Place : Bengaluru.** **Signature of the Publisher / Editor**

# ಸುಕೋ ಬ್ಯಾಂಕಿನ 'ಸ್ಟಾರ್ಟ್ ಅಪ್ ಟು ಸೆಲ್ಫ್ ಎಂಪ್ಲಾಯ್ಮೆಂಟ್' ಯೋಜನೆಯ ಫಲಾನುಭವಿಗಳಿಗೆ ಸಾಲ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ



**ಬೆಂಗಳೂರು :** 'ಸ್ಟಾರ್ಟ್ ಅಪ್ ಟು ಸೆಲ್ಫ್ ಎಂಪ್ಲಾಯ್ಮೆಂಟ್' (SU2SE) ಎನ್ನುವ ಸುಕೊ ಬ್ಯಾಂಕಿನ ವಿಶೇಷ ಸಾಲ ಯೋಜನೆ ಮೂಲಕ ಉದ್ಯೋಗಾವಕಾಶಗಳ ನಿರ್ಮಾಣಕ್ಕೆ ಅತ್ಯುತ್ತಮ ಹೆಜ್ಜೆ ಎಂದು ಉಪ ಮುಖ್ಯಮಂತ್ರಿ ಸಿ.ಎನ್. ಅಶ್ವತ್ಥ ನಾರಾಯಣ್ ಹೇಳಿದರು.

ಬೆಂಗಳೂರು ನಗರದಿಂದ ವರ್ಚುಯಲ್ ಫ್ಲಾಟ್ ಫಾರಂ ಮೂಲಕ ಸುಕೋ ಬ್ಯಾಂಕಿನ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕು ಎನ್ನುವ ಹಿನ್ನಲೆಯಲ್ಲಿ ರಾಜ್ಯ ಸರಕಾರ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. 10 ಲಕ್ಷ ಉದ್ಯೋಗಾವಕಾಶಗಳನ್ನು ನಿರ್ಮಿಸುವುದು ನಮ್ಮ ಗುರಿಯಾಗಿದೆ. ಸ್ಟಾರ್ಟ್-ಆ್ಯಪ್‌ಗಳ ಉದ್ಯಮದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವುದು, ಅದಕ್ಕೆ ಬೇಕಾದ ತರಬೇತಿ ಹಾಗೂ ಉದ್ಯಮ ಪ್ರಾರಂಭಿಸಬೇಕು ಎನ್ನುವವರಿಗೆ ಹೊಸ ಯೋಜನೆಗಳನ್ನು ತಲುಪಿಸುವುದು ಅತ್ಯುತ್ತಮ ಕಲ್ಪನೆಯಾಗಿದೆ. ಇದರಿಂದ ಸ್ಟಾರ್ಟ್-ಆ್ಯಪ್‌ಗಳ ವ್ಯವಹಾರ ಹೆಚ್ಚಾಗುವುದಲ್ಲದೆ, ಗ್ರಾಮೀಣ ಪ್ರದೇಶದ ಹಾಗೂ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದೆ. ಇದು ಅತ್ಯುತ್ತಮ ಯೋಜನೆಯಾಗಿದ್ದು ರಾಜ್ಯ ಸರಕಾರದ ವತಿಯಿಂದ ಅಗತ್ಯವಿರುವ ಸಹಕಾರವನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಸುಕೋ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷ, ಮನೋಹರ್ ಮಸ್ಕಿ ಬಳ್ಳಾರಿಯಿಂದ ಆನ್-ಲೈನ್ ಮೂಲಕ ಮಾತನಾಡಿ, ನಮ್ಮ ಪ್ರದೇಶದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಹೊಸ ರೀತಿಯ ಯೋಜನೆಯನ್ನು ಪ್ರಾರಂಭಿಸಲಾಗಿದೆ. 12 ಜಿಲ್ಲೆಗಳಲ್ಲಿ ಬ್ಯಾಂಕಿನ ಶಾಖೆಗಳಿದ್ದು, ಕರೋನಾ ಸಂಕಷ್ಟ ಕಾಲದಲ್ಲಿ ಸಣ್ಣ ಸಾಲಗಳನ್ನು ನೀಡುವ ಜನರ ಸಹಾಯಕ್ಕೆ ಮುಂದಾಗಿದ್ದೆವು. ಸ್ಟಾರ್ಟ್ ಅಪ್ ಕಂಪನಿಗಳಿಗೆ ಹಣಕಾಸಿನ ಸಹಾಯ ಒದಗಿಸಿ, ಅವರ ಮೂಲಕ ಅವರ ಉತ್ಪನ್ನಗಳನ್ನು ಬಳಸುವವರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ನಾಡಿನ ಜನರಿಗೆ ಆರೋಗ್ಯ ಸೇವೆಗಳು, ಆರೋಗ್ಯಯುತ ಆಹಾರ ಹಾಗೂ ಪರಿಸರ ಸಂರಕ್ಷಣೆಗೆ ಸಣ್ಣ ಸೇವೆ ನೀಡುವುದು ನಮ್ಮ ಉದ್ದೇಶವಾಗಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಲಿ ಅಧ್ಯಕ್ಷ, ಕಲಬುರ್ಗಿ ದಕ್ಷಿಣ ಕ್ಷೇತ್ರದ ಶಾಸಕ ದತ್ತಾತ್ರೇಯ ಸಿ. ಪಾಟೀಲ್ ರೇವೂರ್ ಕಲಬುರಗಿಯಿಂದ ಆನ್-ಲೈನ್ ನಲ್ಲಿ ಭಾಗವಹಿಸಿ ಮಾತನಾಡಿ, ನಾಡಿನ ಯುವ ಜನರು ನೌಕರಿಗಳಿಗಾಗಿ ಹುಡುಕಾಡದೆ ಇಂತಹ ಯೋಜನೆಗಳ ಲಾಭವನ್ನು ಪಡೆದುಕೊಂಡು ಸ್ವಯಂ ಉದ್ಯೋಗ ಆರಂಭಿಸಿ ತಾವೂ ಬೆಳೆದು ಇತರ ಯುವಜನರಿಗೆ ಉದ್ಯೋಗಗಳನ್ನು ಸೃಷ್ಟಿಸಬೇಕೆಂದು ಕರೆ ನೀಡಿದರು.

ಸುಕೋ ಬ್ಯಾಂಕಿನ ಅಧ್ಯಕ್ಷರಾದ ಮೋಹಿತ ಮಸ್ಕಿಯವರು ಮಾತನಾಡಿ, ಸುಕೋ ಬ್ಯಾಂಕು ಯಾವಾಗಲೂ ವಿಶಿಷ್ಟ ಹಾಗೂ ವಿನೂತನ ಗ್ರಾಹಕ ಸ್ನೇಹಿ ಯೋಜನೆಗಳನ್ನು ರೂಪಿಸಿ ಜನರಿಗೆ ತಲುಪುವಂತೆ ಮಾಡುತ್ತಿದೆ. ತಂತ್ರಜ್ಞಾನವನ್ನು ಬಳಸುವಲ್ಲಿ ಸಹಕಾರಿ ಕ್ಷೇತ್ರದಲ್ಲಿ ಯಾವಾಗಲೂ ಮುಂಚೂಣಿ ಬ್ಯಾಂಕಾಗಿ ಅಭಿವೃದ್ಧಿ ಹೊಂದುತ್ತಿದೆ. ಇಂದಿನ ಆನ್‌ಲೈನ್ ಮೂಲಕ ಯೋಜನೆ ಪ್ರಾರಂಭಿಸಿದ್ದು ಇದಕ್ಕೆ ಉದಾಹರಣೆಯಾಗಿದೆ. ಈ ವಿಶೇಷ ಯೋಜನೆಯಿಂದ ಸುಮಾರು 500 ಕ್ಕೂ ಹೆಚ್ಚಿನ ಯುವಕ ಯುವತಿಯರ ಸ್ವಾವಲಂಬನೆಯ ಬದುಕಿಗೆ ನೆರವಾಗಲಿದೆ. 'ಸ್ವ ಉದ್ಯೋಗಕ್ಕಾಗಿ ಸ್ಟಾಟ್ ಆಪ್' ಯೋಜನೆಯನ್ನು ಸುಕೋ ಬ್ಯಾಂಕ್ ರೂಪಿಸಿರುವ 'ಸ್ಟಾರ್ಟ್ ಅಪ್ ಟು ಸೆಲ್ಫ್ ಎಂಪ್ಲಾಯ್ಮೆಂಟ್' ವಿಶೇಷ ಸಾಲ ಯೋಜನೆ ಅಡಿಯಲ್ಲಿ ಸಾಲ ನೀಡುವ ಪ್ರಕ್ರಿಯೆಯನ್ನು ಆರಂಭಿಸಲಾಗುತ್ತದೆ ಎಂದು ಮೋಹಿತ ಮಸ್ಕಿ ಅವರು ತಿಳಿಸಿದರು.

## ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಎಸ್. ಆರ್ ಸತೀಶ್ಚಂದ್ರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಉಮೇಶ್ ಪ್ರಭು ಕೆ. ಆಯ್ಕೆ



ಶ್ರೀ ಎಸ್.ಆರ್ ಸತೀಶ್ಚಂದ್ರ
**ಅಧ್ಯಕ್ಷರು**

**ದಕ್ಷಿಣ ಕನ್ನಡ :** ಶ್ರಿ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಕ್ಯಾಂಪ್ಕೋ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್ ಸತೀಶ್ಚಂದ್ರ ಇವರು ಪುನರಾಯ್ಕೆಯಾಗಿರುತ್ತಾರೆ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಉಮೇಶ್ ಪ್ರಭು ಕೆ ಆಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



ಶ್ರೀ ಉಮೇಶ್ ಪ್ರಭು ಕೆ
**ಉಪಾಧ್ಯಕ್ಷರು**

## ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಬಸವರಾಜ್ ಸ್ವಾಮಿ ಪುನರಾಯ್ಕೆ



ಶ್ರೀ ಗುರುನಾಥ್ ಜ್ಯಾಂತಿಕರ
ಅಧ್ಯಕ್ಷರು

**ಬೀದರ :** ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಬಸವರಾಜ್ ಸ್ವಾಮಿ ಪುನರಾಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



ಶ್ರೀ ಬಸವರಾಜ್ ಸ್ವಾಮಿ
ಉಪಾಧ್ಯಕ್ಷರು

## ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಸಂಜೀವ್ ಮಹಾಜನ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಸಿದ್ರಾಮಪ್ಪ ಎಸ್ ಪಾಟೀಲ ಪುನರಾಯ್ಕೆ



ಶ್ರೀ ಸಂಜೀವ್ ಮಹಾಜನ್
ಅಧ್ಯಕ್ಷರು

**ಕಲಬುರಗಿ :** ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಹಾಗೂ ಉಪಾಧ್ಯಕ್ಷರಾಗಿ ಬಸವೇಶ್ವರ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಎಸ್ ಪಾಟೀಲ ಪುನರಾಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



ಶ್ರೀ ಸಿದ್ರಾಮಪ್ಪ ಎಸ್ ಪಾಟೀಲ
ಉಪಾಧ್ಯಕ್ಷರು



## ರಾಷ್ಟ್ರೀಯ ಕಾಫಿ ಮಂಡಳಿಯ ಉಪಾಧ್ಯಕ್ಷರಾಗಿ ಡಾ|| ಜಿ.ಎಸ್. ಮಹಾಬಲ ಆಯ್ಕೆ

**ಚಿಕ್ಕಮಂಗಳೂರು :** ಚಿಕ್ಕಮಂಗಳೂರು ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ಡಾ|| ಜಿ.ಎಸ್. ಮಹಾಬಲ ಇವರು ಇತ್ತೀಚಿಗೆ ನಡೆದ ಕಾಫಿ ಮಂಡಳಿ ಚುನಾವಣೆಯಲ್ಲಿ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



**ಕಲಬುರಗಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಕಲಬುರಗಿ ಪ್ರಾಂತೀಯ ಕಛೇರಿಗೆ ಆಗಮಿಸಿದ ಕಲಬುರಗಿ ಹಾಗೂ ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಉಪಾಧ್ಯಕ್ಷರಾದ ಶ್ರೀ ಸುರೇಶ ಸಜ್ಜನ ಇವರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ ರವರು ಹಾಗೂ ಶ್ರೀ ಸಂಜೀವ ಮಹಾಜನ ರವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಪಾಟೀಲ ರವರು ಉಪಸ್ಥಿತರಿದ್ದರು.



**ರಾಯಚೂರು :** ಮಹಾಲಕ್ಷ್ಮೀ ಸೌಹಾರ್ದ ಕೋ-ಆಪರೇಟಿವ್ ಲಿ., ಸಿಂಧನೂರು ಸಹಕಾರಿಯ ದಿನಾಂಕ 05-02-2021 ರಂದು ಸಹಕಾರಿಯ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಎಂ.ವಿ. ಮೋಹನ್ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಶ್ರೀ ಅಮರೇಶ ಹೋಸಳ್ಳಿ ಇವರು ಅವಿರೋಧ ಆಯ್ಕೆಯಾಗಿರುತ್ತಾರೆ.



## ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗೆ ಶ್ರೀ ಎಸ್. ಎಸ್ ಪಾಟೀಲ ಆಯ್ಕೆ

**ಬೆಂಗಳೂರು :** ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗೆ ಸಹಕಾರಿ, ಕೃಷಿ ಹಾಗೂ ಶಿಕ್ಷಣ ಕ್ಷೇತ್ರದ ಸಾಧಕ ಶ್ರೀ ಎಸ್.ಎಸ್ ಪಾಟೀಲ ಇವರು ಆಯ್ಕೆಯಾಗಿದ್ದಾರೆ.

ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶ್ರೀ ಗುರು ರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಮಸ್ಕಿ, ರಾಯಚೂರು



ಶ್ರೀ ಪ್ರತಾಪಗೌಡ ಪಾಟೀಲ್
ಅಧ್ಯಕ್ಷರು



ಶ್ರೀ ಶ್ರೀನಿವಾಸ ಇಲ್ಲೂರು
ಉಪಾಧ್ಯಕ್ಷರು

### ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಕಲಬುರಗಿ



ಶ್ರೀ ಸಿದ್ರಾಮಪ್ಪ ಎಸ್ ಪಾಟೀಲ
ಅಧ್ಯಕ್ಷರು



ಶ್ರೀ ಬಸವರಾಜ ಎಸ್ ಸಮಾಳ
ಉಪಾಧ್ಯಕ್ಷರು

### ಮಧು ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು.



ಶ್ರೀ ಪುಟ್ಟಯ್ಯ
ಅಧ್ಯಕ್ಷರು



ಶ್ರೀ ಕೆ.ಎಸ್ ಮಂಜುನಾಥ್ ಗುಪ್ತ
ಉಪಾಧ್ಯಕ್ಷರು

### ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಣಸಮಾರನಹಳ್ಳಿ



ಶ್ರೀ ಆರ್. ರವಿಚಂದ್ರ
ಅಧ್ಯಕ್ಷರು



ಶ್ರೀ ಎ.ಎಂ ಸುಜಾತ
ಉಪಾಧ್ಯಕ್ಷರು

### ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ,



ಶ್ರೀ ಭಾಸ್ಕರ್ ಕಾಮತ್
ಅಧ್ಯಕ್ಷರು



ಶ್ರೀ ಮಧುಸೂದನ ನಾಯಕ್
ಉಪಾಧ್ಯಕ್ಷರು

### ಭೀಮಜ್ಯೋತಿ ಸೌಹಾರ್ದ ಸಹಕಾರಿ ನಿ., ಮೈಸೂರು



ಶ್ರೀ ತಿಪ್ಪಯ್ಯ
ಅಧ್ಯಕ್ಷರು



ಶ್ರೀ ಆರ್. ಲಕ್ಷ್ಮಣ್
ಉಪಾಧ್ಯಕ್ಷರು

### ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ, ಬಳ್ಳಾರಿ



ಶ್ರೀ ಕೆ.ವಿ ಪತ್ತಾರ
ಅಧ್ಯಕ್ಷರು



ಶ್ರೀ ಐ ಭೀಮಾಜಿ
ಉಪಾಧ್ಯಕ್ಷರು

### ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು.



ಶ್ರೀ ಸದಾಶಿವರೆಡ್ಡಿ
ಅಧ್ಯಕ್ಷರು



ಶ್ರೀ ವಿ. ಶಂಕರ ರೆಡ್ಡಿ
ಉಪಾಧ್ಯಕ್ಷರು

# ತೆಲಂಗಾಣ ಸಹಕಾರಿಗಳ ಭೇಟಿ



**ಬೆಂಗಳೂರು** : ದಿನಾಂಕ 20.02.2021ರಂದು ತೆಲಂಗಾಣ ರಾಜ್ಯದ ಶ್ರೀ ರಾಮ ಸಂಘದ ವತಿಯಿಂದ ಪ್ರಮುಖರು ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ನಡೆಸಲು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಉಪಸ್ಥಿತರಿದ್ದರು.



**ಪಾವಗಡ** : ದಿನಾಂಕ 20.02.2021ರಂದು ತೆಲಂಗಾಣ ರಾಜ್ಯದ ಶ್ರೀ ರಾಮ ಸಂಘದ ವತಿಯಿಂದ ಪ್ರಮುಖರು ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ನಡೆಸಲು ಬೆಂಗಳೂರು ನಗರದ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಸಹಕಾರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ಪ್ರಮುಖರಿಗೆ ಸೌಹಾರ್ದ ಸಹಕಾರಿಯ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ತಮ್ಮ ಅನುಭವ ಹಂಚಿಕೊಂಡು ಅಗತ್ಯ ಮಾರ್ಗದರ್ಶನ ನೀಡಿದರು. ನಂತರ ಬೆಂಗಳೂರು ನಗರದ ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಸಹಕಾರಿಗೆ ಭೇಟಿ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ. ರವರು ಉಪಸ್ಥಿತರಿದ್ದರು.



**ಮಂಡ್ಯ** : ಮಾರುತಿ ಸೌಹಾರ್ದ ಸಹಕಾರಿ ನಿ., ಬೆಳ್ಳೂರು ಕ್ರಾಸ್, ನಾಗಮಂಗಲ ತಾಲ್ಲೂಕು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಭೇಟಿ ನೀಡಿ ಆಡಳಿತ ಮಂಡಳಿ ಸದಸ್ಯರ ಸಭೆಯಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳ ವರದಿಯನ್ನು ಪಡೆದು ಸಹಕಾರಿಯ ಉನ್ನತಿಗೆ ಮಾರ್ಗದರ್ಶನ ನೀಡಿದರು.



**ಉತ್ತರ ಕನ್ನಡ** : ವಿನಾಯಕ ಸೌಹಾರ್ದ ಸಹಕಾರಿ ಸಿದ್ದಾಪುರ ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಭೇಟಿ ನೀಡಿ ಸಹಕಾರಿ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿಯನ್ನು ಪಡೆದು ಅಗತ್ಯ ಮಾರ್ಗದರ್ಶನ ನೀಡಿದರು.



**ರಾಯಚೂರು** : ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್, ಮಾನ್ವಿ ವತಿಯಿಂದ ಶ್ರೀ ರಾಮ ಜನ್ಮ ಭೂಮಿ ತೀರ್ಥಕ್ಷೇತ್ರ, ಸಮರ್ಪಣಾ ನಿಧಿಗೆ ರೂ. 2 ಲಕ್ಷಗಳನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ನೀಡಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರಾದ, ಶ್ರೀ ಡಿ. ರಾಮಚಂದ್ರ ಶೆಟ್ಟಿ, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಾಗರಾಜ ಹಾಗೂ ಜಿಲ್ಲಾ ಸಂಯೋಜಕ ವೆಂಕಟೇಶ ರಾಠೋಡ ಉಪಸ್ಥಿತರಿದ್ದರು.



**ದಕ್ಷಿಣ ಕನ್ನಡ :** ವಿಶ್ವ ಬೆಳಕು ಸೌಹಾರ್ದ ಸಹಕಾರಿ ನಿಯಮಿತ ಹಾಗೂ ಮೂಲತ್ವ್ ಫೌಂಡೇಶನ್ ಚಾರಿಟೇಬಲ್ ಟ್ರಸ್ಟ್ ಲೈನ್ಸ್ ಕ್ಲಬ್ ಕುಡ್ಲ ಮಂಗಳೂರು ಸಂಯೋಗದಿಂದ ಉಚಿತ ಆಯುಷ್ಮನ್ ಕಾರ್ಡ್ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಎಸ್ ಕೆ ಮಂಜುನಾಥ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಕಾರ್ಪೊರೇಟರ್ ಮನೋಜ್ ಕುಮಾರ್, ಲಯನ್ಸ್ ಕ್ಲಬ್ಬಿನ ಹರೀಶ್ ಪೂಜಾರಿ, ದಕ್ಷಿಣ ಕನ್ನಡ ಜಿಲ್ಲೆಯ ಸಂಯುಕ್ತ ಸಹಕಾರಿ ಅಧಿಕಾರಿ ಶ್ರೀಯುತ ಗುರುಪ್ರಸಾದ್ ಬಂಗೇರ, ಉಡುಪಿ ಜಿಲ್ಲೆಯ ಅಧಿಕಾರಿ ವಿಜಯ್ ಉಪಸ್ಥಿತಿರಿದ್ದರು.



**ಕೊಪ್ಪಳ :** ದಿನಾಂಕ: 27–01–2021 ದಂದು ಕೊಪ್ಪಳ ಜಿಲ್ಲೆಯ ಕೋಪಣ ವಿವಿದ್ದೋದೇಶ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ್ ಜ್ಯಾಂತಿಕರ ಮತ್ತು ಶ್ರೀ ಜಿ. ಶ್ರೀಧರ್ ರವರು ಭೇಟಿ ನೀಡಿ ಸಹಕಾರಿಯ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ಮತ್ತು ಅಗತ್ಯ ಮಾರ್ಗದರ್ಶನವನ್ನು ನೀಡಿದರು.

**ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ದಕ್ಷಿಣ ಕನ್ನಡ**



ಶ್ರೀ ಎ ಸುರೇಶ್ ರೈ
ಅಧ್ಯಕ್ಷರು



ಶ್ರೀ ಲಿಂಗಪ್ಪ ಗೌಡ ಪನೆಯಡ್ಕ
ಉಪಾಧ್ಯಕ್ಷರು



**ಕೊಪ್ಪಳದ :** ಕೊಪ್ಪಳದ ಮಾನ್ಯ ಸಂಸದರಾದ ಶ್ರೀ ಕರಡಿ ಸಂಗಣ್ಣ ರವರ ನೇತೃತ್ವದಲ್ಲಿ ನಡೆಯುತ್ತಿರುವ ಕೊಪ್ಪಳ ಜಿಲ್ಲೆಯ ಗಿಣಿಗೇರಾ ತಾಲೂಕಿನ ಗಿಣಿಗೇರಾ ಕೆರೆಯ ಪುನಶ್ಚೇತನದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಶ್ರೀ ಜಿ ಶ್ರೀಧರ ರವರು ಭೇಟಿ ನೀಡಿದರು.




**ಕೊಪ್ಪಳದ :** ದಿನಾಂಕ : 27–02–2021, ಶನಿವಾರದಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ಶ್ರೀ ಜಿ ಶ್ರೀಧರ ರವರು ಗಂಗಾವತಿ ಶ್ರೀ ಗುರು ಸಿದ್ಧಗಂಗಾ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಪರಿಶೀಲಿಸಿ ಸಹಕಾರಿಯ ಅಭಿವೃದ್ಧಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಿದರು.



**ಕೊಪ್ಪಳ :** ದಿನಾಂಕ: 27–01–2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ಶ್ರೀ ಜಿ ಶ್ರೀಧರ್ ರವರು ಕೊಪ್ಪಳ ಜಿಲ್ಲೆಯ ಸೌಭಾಗ್ಯಲಕ್ಷ್ಮಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಕೊಪ್ಪಳ ತಾಲೂಕಿನ ಸೌಹಾರ್ದ ಸಹಕಾರಿಗಳ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದರು. ಸಭೆಯಲ್ಲಿ ಸೌಭಾಗ್ಯ ಲಕ್ಷ್ಮಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಆಡಳಿತ ಮಂಡಳಿಯ ಸದಸ್ಯರು, ಕೊಪ್ಪಳ ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು.



**ಚಾಮರಾಜನಗರ :** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಇದರ 2021–26ನೇ ಸಾಲಿಗೆ ಆಡಳಿತ ಮಂಡಲಿ ಅಧ್ಯಕ್ಷರಾಗಿ ಶ್ರೀ ಸಿ.ಪಿ ಪದ್ಮಪ್ರಸಾದ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಬಿ.ವಿ ವೆಂಕಟ ನಾಗಪ್ಪ ಶೆಟ್ಟಿ ರವರು ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ನಿರ್ದೇಶಕರು, ಚುನಾವಣಾಧಿಕಾರಿಗಳಾದ ಶ್ರೀ ಶೈಲೇಂದ್ರ ಮತ್ತು ಸಿಇಓ ಬಿ.ಜಿ ಸಂಕೀರ್ತನ್ ಹಾಜರಿದ್ದರು.



**ಮಂಡ್ಯ :** ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಬಿ.ಟಿ ಗುರುರಾಜಶೆಟ್ಟಿ ಮತ್ತು ಉಪಾಧ್ಯಕ್ಷರಾಗಿ ಶ್ರೀ ಎಂ. ಚಂದ್ರಶೇಖರ ಮೂರ್ತಿ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಮಂಡ್ಯ :** ಶ್ರೀ ಎಸ್.ಡಿ.ಮಾಸ್ತಮ್ಮ ಸೌಹಾರ್ದ ಸಹಕಾರಿ ನಿ., ಮದ್ದೂರು ಕಛೇರಿಯಲ್ಲಿ 72ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಧ್ವಜಾರೋಹಣ ಮೂಲಕ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ ಮತ್ತು ಮಹಾತ್ಮ ಗಾಂಧಿಜೀ ರವರ ಭಾವಚಿತ್ರಕ್ಕೆ ಪುಷ್ಪ ಅರ್ಚನೆ ಮಾಡಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಡಿ ಸ್ವಾಮಿ, ಜಾನಪದ ಗಾಯಕರು ಶ್ರೀ ಹೆಚ್.ಎಸ್ ಶಿವಣ್ಣ, ಸಿಇಓ ಶ್ರೀಮತಿ ಎಸ್.ಎಸ್ ಲಕ್ಷ್ಮಿ, ಶ್ರೀ ರಮೇಶ್ ಮತ್ತು ಶ್ರೀ ಚೇತನ್ ಬಾಬು ಹಾಜರಿದ್ದರು.



**ರಾಮನಗರ :** ದಿನಾಂಕ 28.02.2021 ರಂದು ವೀರಶೈವ ಲಿಂಗಾಯತ ಪತ್ತಿನ ಸೌಹಾರ್ದ ಸಹಕಾರಿ ನಿ,. ರಾಮನಗರ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ ಜರುಗಿತು. ಸಮಾರಂಭದಲ್ಲಿ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು, ದೇಗುಲ ಮಠ, ಕನಕಪುರ, ಡಾ. ಶ್ರೀ ಶ್ರೀ ಶಿವರುದ್ರ ಸ್ವಾಮಿಗಳು, ಮರಳೆಗವಿಮಠ, ಕನಕಪುರ, ಶ್ರೀ ಶ್ರೀ ಶಿವರುದ್ರ ಸ್ವಾಮಿಗಳು, ವಿರಕ್ತಮಠ, ಚನ್ನಪಟ್ಟಣ, ಶ್ರೀ ಶ್ರೀ ಮೃತ್ಯುಂಜಯ ಶಿವಾಚಾರ್ಯ ಸ್ವಾಮಿಗಳು, ಮಲ್ಲಿಕಾರ್ಜುನಸ್ವಾಮಿಮಠ, ಬೇವೂರು, ಶ್ರೀ ಪರಮಶಿವಯ್ಯ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರಿ ಅರ್ಬನ್ ಬ್ಯಾಂಕ್ ಫೆಡರೇಷನ್ ಲಿ,. ಬೆಂಗಳೂರು ಹಾಗೂ ವಿವಿಧ ಮಠಾಧೀಶರರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ರವರು ಭಾಗವಹಿಸಿದ್ದರು.



**ಚಾಮರಾಜನಗರ :** ಓಂ ಶ್ರೀ ಏಕದಂತ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಸಹಕಾರಿಯನ್ನು ಶ್ರೀ ರಮೇಶ್ ಹೆಚ್.ಎನ್ ರವರು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು ಉದ್ಘಾಟನೆ ಮಾಡಿ ಶುಭ ಹಾರೈಸಿದರು. ಸಹಕಾರಿಯ ಪ್ರಥಮ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ಶ್ರೀಮತಿ ರೇಣುಕಾ ರವರು, ಮಾನ್ಯ ಅಧ್ಯಕ್ಷರು, ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಉದ್ಘಾಟನೆ ಮಾಡಿದರು. ಮುಖ್ಯ ಅತಿಥಿಯಾಗಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಮತ್ತು ಉಪನ್ಯಾಸಕರಾದ ಶ್ರೀ ಗುರುಪ್ರಸಾದ ರವರು ಭಾಗವಹಿಸಿದ್ದರು.



**ಮೈಸೂರು :** ಜಗನ್ಮಾತೆ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಪ್ರಥಮ ಅಧ್ಯಕ್ಷರಾಗಿ ಶ್ರೀಮತಿ ಶರ್ಮಿಳಾ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಕಾತ್ಯಯಿನಿ ರವರು ಅವಿರೋಧವಾಗಿ ಆಯ್ಕೆಯಾದರು. ಇವರನ್ನು ಶ್ರೀ ಗುರುಮಲ್ಲೇಶ್ವರ ಪದವೀಧರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಅಶ್ವಿನ್ ಖಿ ಪಾಲೆಗಾರ್ ಮತ್ತು ಉಪಾಧ್ಯಕ್ಷರಾದ ಶ್ರೀ ಕಲ್ಮಳ್ಳಿ ನಟರಾಜು ಅಭಿನಂದಿಸಿದರು.



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಬೆಂಗಳೂರು, ಇದರ 2020–21 ರಿಂದ 2025–26ನೇ ಸಾಲಿನ ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಕ್ಕೆ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಎಂ.ಮುನಿರೆಡ್ಡಿ ಮತ್ತು ಉಪಾಧ್ಯಕ್ಷರಾಗಿ ಶ್ರೀ ಎನ್. ವೇಮಾರೆಡ್ಡಿರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಕೊಪ್ಪಳ :** ಶ್ರೀಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ವತಿಯಿಂದ ದೇಣಿಗೆ ನಿಸರ್ಗದತ್ತವಾಗಿ ದೊರೆಯುವ ನೀರು ಗಾಳಿಯಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ಪಾದನೆ ಮಾಡಲು ಯಾರಿಂದಲೂ ಸಾಧ್ಯವೇ ಇಲ್ಲ ಹೀಗಾಗಿ ಇರುವ ಕೆರೆಗಳನ್ನು ಪುನಶ್ಚೇತನಗೊಳಿಸುವುದು ಪ್ರತಿಯೊಬ್ಬರ ಮಹತ್ತರ ಹೊಣೆಗಾರಿಕೆ ಇದೆ ಎಂದು ಗಿಣಗೇರಿಯ ಶ್ರೀಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ಉಪಾಧ್ಯಕ್ಷರಾದ ಗಾಳೆಪ್ಪ ಗೊರವರ್ ನುಡಿದರು.

## ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ನಿರ್ದೇಶಕರಾದ ಶ್ರೀ ಎಸ್. ಟಿ. ವೀರೇಶ್ ರವರು, ದಾವಣಗೆರೆ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಆಯ್ಕೆ



**ದಾವಣಗೆರೆ :** ವಿಶ್ವ ವಿಜೇತ ಸ್ವಾಮಿ ವಿವೇಕಾನಂದ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ನಿರ್ದೇಶಕರಾದ ಶ್ರೀ ಎಸ್. ಟಿ. ವೀರೇಶ್ ರವರು, ದಾವಣಗೆರೆ ಮಹಾ ನಗರ ಪಾಲಿಕೆಯ ನೂತನ ಮೇಯರ್ ಆಗಿ ಆಯ್ಕೆಯಾಗಿದ್ದು, ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಪರವಾಗಿ, ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪರವಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ನಂಜನಗೌಡರವರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಜಿಲ್ಲಾ ಸೌಹಾರ್ದ ಸಂಯೋಜಕರಾದ ಶ್ರೀ ನಟರಾಜ ರವರು ಹಾಗೂ ಮನಿಪ್ಲಾಂಟ್ ಸೌಹಾರ್ದ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ನಾಗರಾಜ ಮೂರ್ತಿರವರು ಭೇಟಿ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು.




**ಬೆಳಗಾವಿ :** ದಿನಾಂಕ 02.03.2021 ರಂದು ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ದ್ವಿತೀಯ ಶಾಖೆ ಉದ್ಘಾಟನೆಯನ್ನು ದಿವ್ಯ ಸಾನಿಧ್ಯ ಶ್ರೀ ಮ.ಘ.ಚ. ಪವಾಡೇಶ್ವರ ಮಹಾಸ್ವಾಮಿಗಳು ಮರಡಿಮಠ, ಕೊಣ್ಣೂರು ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಚಂದ್ರಪ್ಪಾ ಬ ಹೆಬ್ಬಾಳಿ, ಎಲ್ಲಾ ಆಡಳಿತ ಮಂಡಳಿಯ ಸದಸ್ಯರು ಹಾಗೂ ಮದಿಹಳ್ಳಿ ಮತ್ತು ಹೊಸೂರ ಶಾಖೆಯ ಸಲಹಾಸಮಿತಿ ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಪಟ್ಟಣ ಸಹಕಾರ ಬ್ಯಾಂಕುಗಳ ಬಲ ಸಂವರ್ಧನೆಗಾಗಿ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಇತ್ತೀಚಿನ ತಿದ್ದುಪಡಿಗಳ ಹಿನ್ನಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 15.02.2021ರಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಿದೆ. ಅದರ ವಿವರಗಳು ಈ ಕೆಳಕಂಡತಿದೆ.**

प्रेस प्रकाशनी PRESS RELEASE

भारतीय रिज़र्व बैंक
RESERVE BANK OF INDIA
वेबसाइट : www.rbi.org.in/hindi
Website : www.rbi.org.in
ई-मेल/email: helpdoc@rbi.org.in

संचार विभाग, केंद्रीय कार्यालय, एस.बी.एस.मार्ग, मुंबई-400001
Department of Communication, Central Office, S.B.S.Marg, Mumbai-400001
फोन/Phone: 022- 22660502

February 15, 2021

**RBI announces constitution of an Expert Committee on Primary (Urban) Co-operative Banks**

As part of the Statement on Developmental and Regulatory Policies released along with the Monetary Policy Statement on February 05, 2021, the Reserve Bank has announced setting up of an Expert Committee on UCBs to examine the issues and to provide a road map for strengthening the sector, leveraging on the recent amendments to Banking Regulation Act, 1949 (As Applicable to Cooperative Societies).

Accordingly, the Reserve Bank of India has constituted an Expert Committee with the following composition:

| | | |
|---|---|---|
| 1. | Shri N. S. Vishwanathan, former Deputy Governor, Reserve Bank of India | Chairman |
| 2. | Shri Harsh Kumar Bhanwala, former Chairman, NABARD | Member |
| 3. | Shri Mukund M Chitale, Chartered Accountant | Member |
| 4. | Shri N. C. Muniyappa, IAS (Retired) | Member |
| 5. | Shri R. N. Joshi, IAS (Retired) | Member |
| 6. | Prof M. S. Sriram, IIM Bangalore | Member |
| 7. | Shri Jyotindra M. Mehta, President, NAFCUB | Member |
| 8. | Shri Neeraj Nigam, Chief General Manager-in-Charge, Department of Regulation, Reserve Bank of India | Convenor |

The Terms of Reference (ToR) of the committee will be as under:

i. Take stock of the regulatory measures taken by the Reserve Bank and other authorities in respect of UCBs and assess their impact over last five years to identify key constraints and enablers, if any, in fulfilment of their socio-economic objective.

ii. Review the current Regulatory/Supervisory approach and recommend suitable measures/changes to strengthen the sector, taking into account recent amendments to the Banking Regulation Act, 1949 (As Applicable to Cooperative Societies).

iii. Suggest effective measures for faster rehabilitation / resolution of UCBs and assess potential for consolidation in the sector.

iv. Consider the need for differential regulations and examine prospects to allow more leeway in permissible activities for UCBs with a view to enhance their resilience.

v. Draw up a vision document for a vibrant and resilient urban co-operative banking sector having regards to the Principles of Cooperation as well as depositors' interest and systemic issues.

The Committee will submit its report within three months from the date of its first meeting. Department of Regulation (DoR) will provide the necessary secretarial assistance to the Committee.

(Yogesh Dayal)
Chief General Manager

Press Release: 2020-2021/1103

## ವಿಶ್ವ ಮಹಿಳಾ ದಿನಚರಣೆ ಪ್ರಯುಕ್ತ ಲೇಖನ

# ಮಹಿಳೆಯರ ಸಬಲೀಕರಣ ಮತ್ತು ಪ್ರಸ್ತುತ ಸವಾಲುಗಳು

– ಮಾಧುರಿ ದೇಶಪಾಂಡೆ.



ಮಹಿಳೆ ಪ್ರಪಂಚದ ಒಂದು ಅದ್ಭುತ ಸೃಷ್ಟಿ. ಮಹಿಳೆ ಶಾರೀರಿಕವಾಗಿ ಸ್ವಲ್ಪ ಮಟ್ಟಿಗೆ ಅಶಕ್ತಳು ಎಂಬ ಭಾವನೆ ಹಿಂದಿನ ಕಾಲದಲ್ಲಿತ್ತು. ಆದರೆ ಎಲ್ಲ ಮಹಿಳೆಯರೂ ಅಶಕ್ತರಲ್ಲ, ಲಿಂಗಾಧಾರದ ಮೇಲೆ ಶಕ್ತಿಯನ್ನು ಹಿಂದೂ ಮೌಲ್ಯ ಮಾಪನ ಮಾಡುತ್ತಿರಲಿಲ್ಲ, ಇಂದೂ ಮಾಡುವುದಿಲ್ಲ. ಸಮಾಜದ ರೀತಿ–ನೀತಿಗಳು ಕಟ್ಟು ಪಾಡುಗಳಿಂದ ಹಿಂದೆ ಕುಳಿತಿದ್ದ ಮಹಿಳೆ ಇಂದು ಎಲ್ಲ ಕ್ಷೇತ್ರಗಳಲ್ಲೂ ತನ್ನ ಶಕ್ತಿಯನ್ನು ಪ್ರಾಬಲ್ಯವನ್ನು ತೋರಿದ್ದಾಳೆ.

ಹಿಂದೆಯೂ ಮಹಿಳೆಯರು ಸಬಲೆಯರಾಗಿದ್ದರು ಎಂದು ನಾನು ಏಕೆ ಹೇಳಿದೆ ಎಂದರೆ ಬಹಳಷ್ಟು ಜನರಿಗೆ ತಿಳಿಯದಿರುವ ವಿಷಯವೆಂದರೆ ರಾಮಾಯಣದ ಕಾಲದಲ್ಲಿ ಸೀತೆಗೂ ಗುಪ್ತಚಾರಿಣಿಯರು ಇದ್ದರು. ಅವಳೂ ಕೂಡ ರಾಜ್ಯದ ಜನರ ಬಗೆಗೆ ರಾಜ್ಯದ ಪರಿಸ್ಥಿತಿಯ ಬಗೆಗೆ ತಿಳಿದಿದ್ದಳು ಎಂಬ ವಿಚಾರವನ್ನು ಹಲವರಿಗೆ ತಿಳಿದಿರುವುದಿಲ್ಲ. ಮಹಾಭಾರತದ ದ್ರೌಪದಿಯೂ ಕೂಡ ಅಷ್ಟೇ ಮೇಧಾವಿಯಾಗಿದ್ದು ರಾಜ್ಯ ಭಾರದಲ್ಲಿ ಆಳುಕಾಳುಗಳ ಪೋಷಣೆ ಸಾಕುವುದು ಅವರ ನಡವಳಿಕೆಗಳ ಮೇಲೆ ಕಣ್ಣಿಟ್ಟವಳಾಗಿದ್ದಳು ಎಂಬುದನ್ನು ನಾವುಗಳು ಅರಿತಿರುವುದಿಲ್ಲ. ಸಾಮಾಜಿಕ ಮತ್ತು ಅಂದಿನ ಪರಿಸ್ಥಿತಿಯ ಆಧಾರದ ಮೇಲೆ ಸ್ತ್ರೀಯರು ಎಲ್ಲ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಮನುವಾದಿಗಳು ಸ್ತ್ರೀಯ ಸ್ವಾತಂತ್ರ್ಯಕ್ಕೆ ಧಕ್ಕೆ ತಂದರು ಎನ್ನುವ ಬಹಳ ಜನರಿಗೆ ಸ್ತ್ರೀಯರು ಅನಾದಿಕಾಲದಿಂದಲೂ ಸಬಲೆಯರಾಗಿ ತಮ್ಮ ಮನೆಯ ವ್ಯಾಪಾರದ ಎಲ್ಲ ವಿಷಯಗಳಿಗೂ ಪತಿಗೆ ಸಮನಾಗಿ ತಿಳುವಳಿಕೆಯುಳ್ಳವರಾಗಿದ್ದರು ಎಂಬುದನ್ನು ಮರೆತಿರುತ್ತಾರೆ. ಪೌರಾಣಿಕ ಕಾಲವು ಮುಗಿದ ಮೇಲೆ ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ರಾಜ್ಯವನ್ನೇ ಆಳಿದರಾಗಿದ್ದಾರೆ,

ಸ್ವಾತಂತ್ರ್ಯದ ನಂತರ ಮಹಿಳೆಯರು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ದೇಶದ ತಮ್ಮ ಮನೆಯ ಉನ್ನತಿಯಲ್ಲಿ ಪಾಲ್ಗೊಳ್ಳಲು ಆರಂಭಿಸಿದರು. ಮೊದಲು ಮನೆಯಲ್ಲಿಯೇ ಉಳಿದು ಮನೆ ಸಂಸಾರದ ಜವಾಬ್ದಾರಿ ಹೊರುತ್ತಿದ್ದ ಮಹಿಳೆಯರಿಗೆ ಒಂದೊಂದು ಸಂದರ್ಭಗಳಲ್ಲಿ ಸ್ವತಃ ದುಡಿಮೆ ಮಾಡುವ ಅನಿವಾರ್ಯತೆ ಒಂಟಾಗುತ್ತಿತ್ತು. ಆಗ ಹಿರಿಯರು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರಾರಂಭಿಸಿದರು. ಈಗಿನ 70 ವರ್ಷಗಳಲ್ಲಿ ಮಹಿಳೆಯರ ಪರಿಸ್ಥಿತಿ ಬಹಳ ಸುಧಾರಿಸಿದೆ. ಮಹಿಳೆಯರು ಓದುತ್ತಿದ್ದಾರೆ. ವಿದ್ಯಾವಂತರಾಗುತ್ತಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಮೊದ ಮೊದಲು ಕಾರ್ಯಾಲಯಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಕೆಲವೇ ಸೀಮಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದ ಮಹಿಳೆ ಈಗ ಪೈಲೆಟ್, ಆಟೋ, ಬಸ್, ಟ್ರೈನ್ ಚಾಲಕಿಯಾಗಿಯೂ ತನ್ನ ಕೆಲಸವನ್ನು ಸಮರ್ಥವಾಗಿ ನಿಭಾಯಿಸಿದ್ದಾಳೆ. ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಪುರುಷರಷ್ಟೇ ಕೊಡುಗೆ ಮಹಿಳೆಯರದ್ದೂ ಇದೆ. ಸ್ತ್ರೀಯರು ವಿದ್ಯಾಲಯಗಳಲ್ಲಿ ಬೋಧಕರಾಗಿ ಮಾತ್ರವಲ್ಲ, ಯುದ್ಧ ಭೂಮಿಯಲ್ಲಿ ಸೈನಿಕಳಾಗಿಯೂ ನಿಲ್ಲ ಬಲ್ಲಳೆಂಬ ಸವಾಲನ್ನು ಸಕ್ಷಮವಾಗಿ. ಯಶಸ್ವಿಯಾಗಿ ನಿಭಾಯಿಸಿದ್ದಾಳೆ. ಬಹಳಷ್ಟು ಸಂಖ್ಯೆಯ ವೈದ್ಯರು ಸ್ತ್ರೀಯರಾಗಿದ್ದಾರೆ. ಅನೇಕ ವಿಜ್ಞಾನಿಗಳು ಸ್ತ್ರೀಯರಿದ್ದಾರೆ, ಇಂಜಿಯರ್‌ಗಳು, ಎಲ್ಲ ಕ್ಷೇತ್ರಗಳಲ್ಲೂ ಮಹಿಳೆ ಸಬಲಳಾಗಿದ್ದಾಳೆ.

ಇದಿಷ್ಟು ನಗರದ ಮಹಿಳೆಯರ ಕತೆಯಾದರೆ. ಗ್ರಾಮೀಣ ಮಹಿಳೆಯರೂ ಯಾರಿಗೂ ಕಡಿಮೆ ಇಲ್ಲವೆಂಬಂತೆ ತಮ್ಮನ್ನು ತಾವು ಸಾಬೀತು ಪಡೆಸಿದ್ದಾರೆ. ಗ್ರಾಮೀಣ ಮಹಿಳೆಯರಿಗೆ ಕಡಿಮೆ ಅವಕಾಶಗಳೆಂದು ಮೊದಮೊದಲು ಜನರಿಗೆ ಅನಿಸಿದ್ದುಂಟು ಆದರೆ ಅವರೂ ಕೂಡ ಯಾವುದರಲ್ಲಿಯೂ ಕಡಿಮೆ ಇಲ್ಲವೆಂದು ಸಾಬೀತು ಪಡಿಸಿದ್ದಾರೆ. ಕೃಷಿಯ ಸಾಮಗ್ರಿಗಳು, ಕರಕುಶಲ ವಸ್ತುಗಳು, ಕಸೂತಿ, ನೇಯ್ಗೆ, ಹೈನುಗಾರಿಕೆ ಎಲ್ಲ ಕ್ಷೇತ್ರಗಳನ್ನು ತೊಡಗಿಸಿಕೊಂಡು ಮುಂಚೂಣಿಯಲ್ಲಿ ಬೆಳೆದಿದ್ದಾರೆ. ಉತ್ತಮ ಕೃಷಿಕರು ಹೆಚ್ಚು ಇಳುವರಿ ಪಡೆಯುವ ಕವಿತಾಳದ ಕವಿತಾ ಮಿಶ್ರಳಂತಹ ಕೃಷಿಕರು. ವಿದ್ಯಾಭ್ಯಾಸದ ಜೊತೆಗೆ ಕೃಷಿಯಲ್ಲಿ ತೊಡಗಿಸಿಕೊಂಡವರು, ಹೋಟೆಲ್ ಉದ್ಯಮಕ್ಕೆ ಅನಿವಾರ್ಯತೆಯಿಂದ ಬಂದವರು, ಮನೆಯಲ್ಲಿ ಆಹಾರ ತಯಾರಿಕೆಯನ್ನು ಮಾಡಿ ಮಾರುವವರು, ಹೀಗೆ ಗ್ರಾಮೀಣ ಪ್ರದೇಶದಲ್ಲಿ ಸ್ವ ಉದ್ಯೋಗಗಳನ್ನು ಆರಂಭಿಸಿ ಯಶಸ್ಸು ಪಡೆದ ಮಹಿಳೆಯರನ್ನು ಈ ದಶಮಾನದಲ್ಲಿ ಬಹಳಷ್ಟು ಪ್ರಮಾಣದಲ್ಲಿ ಕಾಣಬಹುದಾಗಿದೆ. ಮಹಿಳಾ ಸ್ವ ಸಹಾಯ ಸಂಘಗಳು ಕೋ ಆಪರೇಟಿವ್ ಸೊಸೈಟಿಗಳು, ಹಾಲು ಉತ್ಪಾದಕರ ಸೊಸೈಟಿ ಹೀಗೆ ಅನೇಕ

ಸೋಸೈಟಿಗಳಲ್ಲಿಯೂ ಮಹಿಳೆಯರ ಭಾಗವಹಿಸುವಿಕೆಯನ್ನು ಪಾಲುಗಾರಿಕೆಯನ್ನು ಕಾಣಬಹುದಾಗಿದೆ,

ಪ್ರಸ್ತುತ ಕೋರೋನಾ ರೋಗದ ಪ್ರಭಾವದಿಂದ ಎಲ್ಲ ಉದ್ಯಮಗಳು ಹಿನ್ನಡೆಯ ಹಾದಿಯನ್ನು ಹಿಡಿದಿದ್ದರೂ ಸರಕಾರವು ಅವುಗಳ ಪುನಶ್ಚೇತನದ ಮಾರ್ಗಗಳನ್ನು ಹುಡುಕುತ್ತಿದೆ. ಅನೇಕ ರೀತಿಯ ಹೊಸ ಸುರಕ್ಷತಾ ಯೋಜನೆಗಳೊಂದಿಗೆ ಔದ್ಯೋಗಿಕ ಅವಕಾಶಗಳನ್ನು ಕಲ್ಪಿಸುವ ಪ್ರಯತ್ನವು ರಾಜ್ಯ ಹಾಗೂ ಕೇಂದ್ರ ಸರಕಾರವು ಪ್ರಯತ್ನಿಸುತ್ತಿವೆ. ಸ್ವಾತಂತ್ರ್ಯದ ನಂತರದಿಂದ 70 ವರ್ಷಗಳ ಅವಧಿಯಿಂದಲೂ ಮಹಿಳೆಯರ ಉತ್ಥಾನಕ್ಕೆ ಅನೇಕ ಯೋಜನೆಗಳು ರೂಪುಗೊಳ್ಳುತ್ತವೆ. ಆದರೆ ಅದರ ಪ್ರಯೋಜನವನ್ನು ಬಹಳಷ್ಟು ಪ್ರಮಾಣದಲ್ಲಿ ಪುರುಷರೇ ಪಡೆಯುತ್ತಲೇ ಬಂದಿದ್ದಾರೆ. ಅನೇಕ ಮಹಿಳಾ ರಾಜಕಾರಣಿಗಳು ಇದ್ದರು. ಆಡಳಿತದಲ್ಲಿ ಮಹಿಳೆಯರ ಪ್ರಾತಿನಿಧ್ಯವೂ ಕಡಿಮೆ ಎನ್ನ ಬೇಕಾಗುತ್ತದೆ. ಹಲವರು ಕೇಳಬಹುದು ಏಕೆ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಕೊಡಬಹುದು ಎಂದು ಮಹಿಳೆಗೆ ಯಾವುದೇ ಕೆಲಸವನ್ನು ಕೊಟ್ಟರೂ ಸಹ ಅವಳು ಮೊದಲು ಕೆಲಸಗಾರಳಾಗಿ ಯೋಚಿಸದೇ ಒಂದು ಹೆಣ್ಣಾಗಿ, ತಾಯಿಯಾಗಿ, ಮಡದಿಯಾಗಿ ಯೋಚಿಸಿ ಸಂಪೂರ್ಣ ಮನೆಯ ಜವಾಬ್ದಾರಿಯನ್ನು ಹೊರುವವಳಂತೆ ಒಡತಿಯಾಗಿ ಯೋಚಿಸುತ್ತಾಳೆ. ಪುರುಷರೂ ಸರ್ವರ ಬಗ್ಗೆ ಯೋಚಿಸಿರುತ್ತಾರೆಂದು ಹೇಳ ಬಹುದು ಆದರೆ ಪುರುಷರು ಎಷ್ಟೇ ವ್ಯಾಪಕವಾಗಿ ಯೋಚಿಸಿದರೂ ಮಹಿಳೆಯ ದೃಷ್ಟಿಕೋನದಿಂದ ಯೋಚಿಸುವುದು ಸುಲಭದ ಮಾತಲ್ಲ. ನೀವು ಪ್ರಪಂಚದಲ್ಲಿ ನೋಡಿರಬಹುದು ಒಂದು ಮಗುವನ್ನು ಗಂಡನಿಲ್ಲದೇ ತಾಯಿಯು ಎಲ್ಲ ರೀತಿಯ ಸಂಸ್ಕಾರವನ್ನು ಆತ್ಮ ಸ್ಥೈರ್ಯವನ್ನು ತುಂಬ ಬಲ್ಲಳು ಆದರೆ ಒಬ್ಬ ತಂದೆಗೆ ಮಕ್ಕಳನ್ನು ತಾಯಿಯಾಗಿ ಸಲಹುವ ಶಕ್ತಿ ಸಾಮರ್ಥ್ಯವನ್ನು ಭಗವಂತ ನೀಡಿರುವುದಿಲ್ಲ.

ಇಂದಿನ ಮಹಾಮಾರಿ ಕೋರೋನಾ ರೋಗದ ಹೊಡೆತದಿಂದ ಬಹಳಷ್ಟು ಪೆಟ್ಟು ಗ್ರಾಮೀಣ ಮತ್ತು ಗೃಹ ಉದ್ಯೋಗಗಳಿಗೆ ಬಿದ್ದಿದೆ. ಗ್ರಾಮೀಣ ಭಾಗದಲ್ಲಿರುವ ಸಹಕಾರಿ ಸಂಸ್ಥೆಗಳು, ಸ್ವ ಸಹಾಯ ಸಂಘಗಳು ಮಹಾಮಾರಿಯಿಂದ ಹಾಳಾಗಿರುವ ಉದ್ಯಮದ ಉತ್ಥಾನಕ್ಕೆ ಪುನರಾರಂಭಕ್ಕೆ ಬಹಳಷ್ಟು ಸಹಕಾರವನ್ನು ನೀಡಲಿವೆ. ಎಲ್ಲ ಸಹಕಾರಿ ಸಂಸ್ಥೆಗಳು ಬ್ಯಾಂಕುಗಳು ಮಹಾಮಾರಿಯ ಲಾಕ್‌ಡೌನ್ ಸದರ್ಭದಲ್ಲಿ ಗ್ರಾಹಕರಿಗೆ ಬಹಳಷ್ಟು ದಿನಗಳವರೆಗೆ ಸುಮಾರು 4–6 ತಿಂಗಳುಗಳ ಸಾಲವನ್ನು ತಡವಾಗಿ ಮರುಪಾವತಿ ಮಾಡುವ ಅವಕಾಶವನ್ನು ಸರಕಾರದ ಆದೇಶದ ಮೇರೆಗೆ ನೀಡಿತ್ತು.

ಹಾಗೆಯೇ ಹಿಂದಿನಂತೆ ಮುಂದಿನ ದಿನಗಳಲ್ಲಿಯೂ ಸಹಕಾರ ವಿಭಾಗದವರು ಮಹಿಳೆಯರ ಉದ್ಯಮಗಳಿಗೆ ವಿಶೇಷ ಸವಲತ್ತುಗಳನ್ನು ಯೋಜನೆಗಳನ್ನು ರೂಪಿಸಿ ಮತ್ತೊಮ್ಮೆ ಉದ್ಯಮಗಳು ಬೆಳೆದು ನಿಂತು ಜನರ ಆದಾಯದ ಹಾದಿಯನ್ನು ಸುಗಮ ಮಾಡಿ ರಾಜ್ಯದ ದೇಶದ ಆರ್ಥಿಕತೆಗೆ ಜನರು ಕೈ ಜೋಡಿಸಲು ಸಹಕಾರಿ ಸಂಸ್ಥೆಗಳು ಬ್ಯಾಂಕುಗಳು ಜನರಿಗೆ ಸಹಯೋಗವನ್ನು ನೀಡಲಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮೊದಲಿನಿಂದಲೂ ಅವಶ್ಯಕತೆ ಇರುವ ಉದ್ಯಮಗಳ ಆಧುನಿಕ ತಂತ್ರಜ್ಞಾನಗಳ ತರಬೇತಿಯನ್ನು ಸದಸ್ಯರಿಗೆ ನೀಡಿ ಅವರ ಜೀವನೋಪಾಯಕ್ಕೆ ಹೊಸ ಉದ್ಯಮಗಳನ್ನು ಆರಂಭಿಸಲು ಸಹಕರಿಸಿ ನಂತರ ಅವರ ಆದಾಯ ಆರಂಭವಾದ ನಂಥರ ಸಾಲವನ್ನು ಮರು ಪಾವತಿ ಮಾಡಿಸಿಕೊಂಡು ಜನರಿಗೆ ಸಹಾಯ ಮಾಡುವುದರ ಜೊತೆಗೆ ಸರಕಾರಕ್ಕೂ ಆದಾಯದ ಮೂಲಗಳಾಗಿ ಸಹಕಾರಿ ಕ್ಷೇತ್ರದಲ್ಲಿ ಕೆಲಸಗಳು ನಡೆಯುತ್ತಲಿವೆ. ಸಹಕಾರಿ ಕ್ಷೇತ್ರದಲ್ಲಿಯೂ ಕೂಡ ಮಹಿಳೆಯರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ ಅನೇಕ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳಲ್ಲಿ ಪ್ರಮುಖ ಸ್ಥಾನಗಳಲ್ಲಿ ಮಹಿಳೆಯರು ಅಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಲಿದ್ದಾರೆ. ಸ್ವ ಸಹಾಯ ಸಂಘಗಳಲ್ಲಿಯೂ ಕೂಡ ಸಂಘಟಕರಾಗಿ, ಸದಸ್ಯರಾಗಿ ಪದಾಧಿಕಾರಿಗಳಾಗಿ ಮಹಿಳೆಯರು ಕಾರ್ಯ ನಿರ್ವಹಿಸುತ್ತಲಿದ್ದಾರೆ.

ಇಂದಿನ ಪ್ರಸ್ತುತ ಮಹಾಮಾರಿಯ ಸಮಸ್ಯೆಯಿಂದ ಹಣಕಾಸಿನ ಸಮಸ್ಯೆಯಿಂದ ಪಾರಾಗಲು ಸಹಕಾರಿ ಸಂಸ್ಥೆಗಳು ಕೋ ಆಪರೇಟಿವ್ ಸೊಸೈಟಿಗಳು, ಕೋ ಆಪರೇಟಿವ್ ಬ್ಯಾಂಕ್‌ಗಳೂ ಜನರಿಗೆ ಸಹಕಾರವನ್ನು ನೀಡುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಬ್ಯೂಟಿಶಿಯನ್ ಕೋರ್ಸ್‌ಗಳು, ಕಂಪ್ಯೂಟರ್ ತರಬೇತಿ, ಹೊಲಿಗೆಯ ತರಬೇತಿ, ಬೇಕರಿ ತರಬೇತಿ ಮೊದಲಾದ ತರಬೇತಿಗಳನ್ನು ನೀಡಿ ಸಾಲವನ್ನು ನೀಡಲಾಗುತ್ತದೆ. ಬೇರೆ ಬೇರೆ ಹೊಸ ಹೊಸದಾದ ಉದ್ಯಮದ ಯೋಜನೆಯನ್ನು ರೂಪಿಸಿಕೊಂಡು ಶಾಖೆಗಳಿಗೆ ಹೋದಾಗ ಅದರ ಮೌಲ್ಯಾಂಕನ ಮಾಡಿ ಬಂದ ಸದಸ್ಯ ಅಥವಾ ಅಭ್ಯರ್ಥಿಗೆ ಸಹಾಯ ಮಾಡುವುದರ ಮೂಲಕ ಮೋದಿ ಜೀಯವರ ಆತ್ಮ ನಿರ್ಭರ ಭಾರತದ ಕನಸಿನಲ್ಲಿ ಸಹಕಾರ ಕ್ಷೇತ್ರದ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸುತ್ತವೆ.

ಒಂದು ಮನೆಯ ಆಧಾರ ಸ್ಥಂಬ ಮಹಿಳೆ ಎನ್ನಲಾಗುವುದೋ ಹಾಗೆಯೇ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತಾಳೆ. ಈಗ ಸದ್ಯಕ್ಕೆ ನಮ್ಮ ದೇಶದ ಆರ್ಥಿಕ ನೀತಿಗಳನ್ನು ರೂಪಿಸುವವರು ಮಹಿಳೆಯೇ. ಮಹಿಳೆಯು ತಾಯಿಯಾಗಿ, ಮಗಳಾಗಿ, ಮಡದಿಯಾಗಿ, ಅತ್ತೆಯಾಗಿ, ಅಕ್ಕ–ತಂಗಿಯಾಗಿ ಸ್ನೇಹಿತೆಯಾಗಿ, ಸಹಪಾಠಿಯಾಗಿ ಸಹೋದ್ಯೋಗಿಯಾಗಿ ಎಲ್ಲ ರೀತಿಯಿಂದಲೂ ಪುರುಷರಿಗೆ ಹೆಗಲಿಗೆ ಹೆಗಲು ಕೊಟ್ಟು ನಡೆಯುತ್ತಾಳೆ. ವರ್ಷದ ಯಾವುದೇ ಒಂದು ದಿನ ಅವಳಿಗೆ ಮೀಸಲಿಡುವುದು ಸರಿ ಅನಿಸಿದ್ದರೂ ಎಲ್ಲ ರೀತಿಯಲ್ಲೂ ಎಲ್ಲ ಸಮಯದಲ್ಲೂ ಪುರುಷನಿಗೆ, ಸಂಸಾರಕ್ಕೆ ತನ್ನ ಕಾರ್ಯಕ್ಷೇತ್ರದಲ್ಲಿ ಹುಮ್ಮಸ್ಸಿನಿಂದ ನಿಲ್ಲುವ ಎಲ್ಲ ಮಹಿಳೆಯರಿಗೂ " ಅಂತರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು". ವಿಶ್ವದ ಎಲ್ಲ ಮಹಿಳೆಯರಿಗೂ ನಮ್ಮ ಹೃದಯ ಪೂರ್ವಕ ನಮನ

# Women Empowerment, Issues and Challenges in Economic Development in India

- BHARATHI. S, Guest faculty, RICM

Abstract- Women's Empowerment has been an issue of immense discussions and contemplation over the last few decades world-wide. Women Empowerment in India is dependent on many different variables like education status, social status, economic status, and political status etc. In fact, the status, employment and work performed by women in society are the indicator of a nation's overall progress. Without the participation of women in national activities, the social, economic or political progress of a country will be stagnated.

Key words: Empowerment, Educational status, Social status, Economic status, Empowering Women

## WOMEN EMPOWERMENT IN INDIA

### Introduction :

Empowering the women means creating an environment in which women can take independent decision for their personal development and the development of society in general. Empowerment is the process by which the women achieve increase control and participation in decision making which in-turn helps to achieve equality in political, economic, social, and cultural status in the society. Mahatma Gandhi has stated that the position of women in the society is an index of its civilization, "train a man and you train an individual, train a women and you build a nation". Swami Vivekananda one of the greatest son of India, quoted that "there is no chance for the welfare of the world, unless the condition of women is improved; it is not possible for a bird to fly on one wing". At present, the government of India has come up with various welfare programs to transform colossal women force into an effective human resource for overall development of economy.

### Review of Literature:

The various studies conducted by social and political scientist have discussed various micro and macro issues and problems related to women empowerment.

Only 2 per cent of women have been married among other caste. In a Hindu dominated society we see my stringent rules against marriage with in gotra, fraternity etc. and regulation about not allowing the women to marry certain type of close relative. (Chandrakala Hate: 1969)

The march of literacy failed to keep pace with the growth of population and the total number of illiterates among males and females at the end of each census decade exceeded the corresponding number at the beginning of the decade, although percentage increase in literacy was substantial. (Ashok mitra: 1979)

It is been revealed that apart from liberalization, globalization and privatization, a social revolution and liberalization of minds towards greater equality has taken place in the society. (Akilesh Kumar: 2003)

The establishment of Shree Shakthi Group in Karnataka has increased the socio-economic condition of rural and semi urban poor women (A.T.Kitrur and M.V.Shidaganal: 2010)

Women empowerment in urban society is similar to that of other structure, where many women are not involved in it, especially in the decision-making bodies. It is hard for them to participate in public spheres such as the political, administrative, judiciary and trade union due to cultural barriers, low educational status and other problems. (Vipin Kumar Singhol: 2012)

The women empowerment has gotten to be a standout amongst the most essential worries of 21st century at national level as well as global level. Government activities alone would not be adequate to accomplish this objective. Society must step-up with regard to make an atmosphere in which there is no sexual orientation segregation and women have full chances of self-basic leadership and taking an interest in social, political and monetary existence of the nation with a feeling of equity. (Shail Mishra: 2017)

## Issues and Problems faced by Women in India

There are various issues and problems which women

generally face in the society in India. Some of the problems are mentioned and described below:

**1. Selective abortion and female infanticide**

It is the most common practice for years in India in which abortion of female fetus is performed in the womb of mother after the fetal sex determination and sex selective abortion by the medical professionals.

**2. Sexual harassment**

It is the form of sexual exploitation of a girl child at home, streets, public places, transports, offices, etc by the family members, neighbors, friends or relatives.

**3. Dowry and Bride burning**

It is another problem generally faced by women of low or middle class family during or after the marriage. Parents of boys demand a lot of money from the bride's family to be rich in one time. Groom's family perform bride burning in case of lack of fulfilled dowry demand. In 2005, around 6787 dowry death cases were registered in India according to the Indian National Crime Bureau reports.

**4. Disparity in education**

The level of women education is less than men still in the modern age. Female illiteracy id higher in the rural areas. Where over 63% or more women remain unlettered.

**5. Domestic violence**

It is like endemic and widespread disease affects almost 70% of Indian women according to the women and child development official. It is performed by the husband, relative or other family member.

**6. Child Marriages**

Early marriage of the girls by their parents in order to be escaped from dowry. It is highly practiced in the rural India.

**7. Inadequate Nutrition**

Inadequate nutrition in the childhood affects women in their later life especially women belonging to the lower middle class and poor families.

**8. Low status in the family**

It is the abuse or violence against women.

**9. Women are considered as inferior to men**

So they are not allowed to join military services.

**10. Status of widows**

Widows are considered as worthless in the Indian society. They are treated poorly and forced to wear white clothes.

Earlier women were facing problems like child marriage, sati pratha, pardapratha, restriction to widow remarriage, widows' exploitation, devadasi system, etc. However, almost all the old traditional problems have been disappeared gradually from the society but given rise to other new issues. Women are continuously facing many problems even after having self-confidence, individuality, self-respect, personality, capacity, talent, and efficiency more than men. They are facing problems in their daily life even after they are given equal rights and opportunities like men by the Constitution of India.

**Some of the major problems modern women are still facing mentioned below:**

**1. Violence against women:**

Women are getting affected by the various violence almost every day which is disrupting the society. Women are being victims of violence at huge level day by day because of increasing crimes against women (according to the report of Crime Record Bureau of the Central Home Ministry). Woman is getting kidnapped at every 44 minutes, raped at every 47 minutes, 17 dowry deaths every day, etc. They may face violence within the family (dowry related harassment, death, marital rape, wife-battering, sexual abuse, deprivation of healthy food, female genital mutilation, etc) or outside the family (kidnapping, rape, murder, etc).

**2. Gender discrimination**

Women are considered as weaker section of the society than men and given less importance. Girls' children are becoming real victims of the discrimination. There are also discrimination of power and work between men and women because of the patriarchal system families in India. Gender discrimination affects women in the areas like nutrition, education, health, care, decline of female population, job, public life, etc.

**• Problems of female education**

Women education percentage is low in India especially in the rural areas because they are discouraged for higher education like professional and technical education.

**• Problems related to unemployment**

Women are getting more problems in searching their suitable work. They become more prone to the exploitation and harassment in the work areas.

**• Boss Intentionally**

They are given more work and hard tasks by their boss intentionally. They have to prove their devotion, seriousness and sincerity towards work time to time.

**• Unbearable Conditions**

Women who are uneducated more prone to divorce and desertion by their husbands on any stage of life. They have to live whole life with fear of divorce. In some cases they have to finish their life because of unbearable conditions. Dowry system is another huge women problem in the society which is increasing day by day. Women are ill-treated, man-handled, disrespected, tortured and suffer other cruelties (violence, murder and suicide) because of the lack of dowry at the time of marriage. It causes degradation of women status to a great extent.

## GOVERNMENT EFFORTS TOWARDS WOMEN EMPOWERMENT IN INDIA

Press Information Bureau, the Government of India-Ministry of Women and Child Development had reported on 10th December 2015 about the measures that are taken by the government towards women empowerment. According to the National Sample Survey Report (2011-12), the workforce participation rates of male are 54.4% and female is 21.9%. As per the India Country Report, 2015 by Ministry of Statistics and Program Implementation on the Millennium Development Goals, the percentage share of females in wage employment in the non-agricultural sector during 2011-12 increased to 19.3% which is higher than 18.6% reported during 2009-10 by National Sample Survey Organization.

Some of the schemes that are introduced by government of India towards women empowerment are mentioned below:

- Swadhar and Short Stay Homes to provide relief and rehabilitation to destitute women and women in distress.
- Working Women Hostels for ensuring safe accommodation for working women away from their place of residence.
- Support to Training and Employment Program for Women (STEP) to ensure sustainable employment and income generation for marginalized and asset-less rural and urban poor women across the country.
- Rashtriya Mahila Kosh (RMK) to provide micro-finance services to bring about the socio-economic upliftment of poor women.
- National Mission for Empowerment of Women (NMEW) to strengthen the overall processes that promote all-round Development of Women
- Rajiv Gandhi National Creche Scheme for Children of Working Mothers (including single mother) to provide day care facilities for running a crèche of 25 children in the age group 0-6 years from families having monthly income of less than Rs 12,000.
- One Stop Centre to provide integrated support and assistance to women affected by violence.
- Scheme for Universalisation of Women Helpline intended to provide 24 hours immediate and emergency response to women affected by violence.
- Sabla Scheme for holistic development of adolescent girls in the age group of 11-18 years.

In order to strengthen the process of gender budgeting the Ministry of Women and Child Development has been undertaking various capacity building measures for the officials of the State Governments by organising training programs/workshops regularly. In order to improve employability of women, a separate Ministry of Skill Development and Entrepreneurship has been created. Equal Remuneration Act, 1973 provides for payment of equal remuneration to men and women workers for the same work of similar nature without any discrimination. In order to ensure social security to the workers including women in the unorganized sector, the Government has enacted the Unorganized Workers‟ Social Security Act 2008. The Maternity Benefit Act, 1961 regulates employment of women in certain establishments for a certain period (12 weeks) before and after childbirth and provides for maternity and other benefits. Indira Gandhi Matritva Sahyog Yojana (IGMSY) Scheme is being implemented as Conditional Maternity Benefit for pregnant and lactating women to improve health and nutrition status to better enabling environment by providing cash incentives to pregnant and nursing mothers

to partly compensate wage loss both prior to and after delivery. The Sexual Harassment of Women at Workplace (Prevention, Prohibition and Redressal) Act, 2013 has been enacted, which covers all women, irrespective of their age or employment status and protect them against sexual harassment at all workplaces both in public and private sector, whether organized or unorganized. The Constitution of India has also laid down certain Provisions for Empowering Women in India such as:

- Equality before law for all persons -Article-14.
- Prohibition of discrimination on grounds of religion, race, caste, sex or place of birth –
- Article 15(I).
- Special provisions may be made by the state in favors of women and children Article 15(3). Equality of opportunity for all citizens relating to employment or appointment to any office under the state -Article 16.
- State policy to be directed to securing for men and women equally the right to an adequate means of livelihood- Article 39(a).
- Equal pay for equal work for both men and women -Article 39(d).
- Provisions to be made by the state for securing just and humane conditions of work and maternity relief -Article 42.
- Promotion of harmony by every citizen of India and renouncement of such practices which are derogatory to the dignity of women -Article 51A (e).
- Reservation of not less than one-third of total seats for women in direct election to local bodies, viz; Panchayats and Municipalities- Articles 343(d) and 343 (T).

The Government of India has over 34 schemes for women operated by different department and ministries that actually promoting women empowerment.

- Rastria Mahila Kosh (RMK) 1992-1993
- Mahila Samridhi Yojana (MSY) October, 1993.
- Indira Mahila Yojana (IMY) 1995.
- Women Entrepreneur Development programme given top priority in 1997-98.
- Mahila Samakhya being implemented in about 9000 villages.
- Swayasjdha.
- Swa Shakti Group.
- Support to Training and Employment Programme for Women (STEP).
- Swalamban.
- Crèches/ Day care centre for the children of working and ailing mother.
- Hostels for working women.
- Swadhar.
- National Mission for Empowerment of Women.
- Integrated Child Development Services (ICDS) (1975),
- Rajiv Gandhi Scheme for Empowerment of Adolescence Girls (RGSEAG) (2010).
- The Rajiv Gandhi National Crèche Scheme for Children of Working Mothers.
- Integrated Child Protection scheme (ICPS) (2009-2010). Dhanalakahmi (2008).
- Short Stay Homes.
- Ujjawala (2007).
- Scheme for Gender Budgeting (XI Plan).
- Integrated Rural Development Programme (IRDP).
- Training of Rural Youth for Self Employment (TRYSEM).
- Prime Minister's Rojgar Yojana (PMRY).
- Women's Development Corporation Scheme (WDCS).
- Working Women's Forum.
- Indira Mahila Kendra.
- Mahila Samiti Yojana.
- Khadi and Village Industries Commission.
- Indira Priyadarahini Yojana.
- SBI's Sree Shaki Scheme.
- SIDBI's Mahila Udyam Nidhi Mahila Vikas Nidhi.
- NGO's Credit Schemes
- National Banks for Agriculture and Rural Development's Schemes

The efforts of government are supported by NGO organizations that are playing an equally important role in facilitating women empowerment. Despite concerted efforts of governments and NGOs there are certain gaps that avoid women empowerment. India has come a long way in empowering women yet the future journey is difficult and demanding.

## ROLE OF WOMEN EMPOWERMENT IN ECONOMIC DEVELOPMENT OF INDIA

In the 21st century with the increase in enrolment of women in higher education, they have become more intellectual which have led to create equal opportunities with men in the field of socio, economic and political areas. By educating women the nation becomes more stronger and create awareness on the significance of the gender equality. While women are being educated, their participation in the field of social, economic and political areas have increased significantly. In today's scenario women are taking up multiple roles, they have become more competitive to their counterparts. With an increase in women labour force, the country is capable of getting additional labour force which helps in producing additional goods and services in the country.(women contributes to country's GDP). With increase in production of goods and services in the economy, country can generate more revenue which in-turn leads to economic development of country.

## FUTURE WORK CHALLENGES TO WOMEN EMPOWERMENT IN INDIA

India has come a long way in empowering the women status. According to Upanishad the primary duty of women is to be in service of her husband and family. But in today's time we speak about 1/3rd seat reservation for women in parliament. The different phases of women empowerment is here: Ancient India- primary duty of women is husband service. Medieval India- when women were not let out and express her opinion, sati system was in practice Pre-independence-sati system was stopped but women were made to stay inside the house after her husband death. 1950‟s- women were encourage to go to schools and colleges 1960‟s- dowry system was prohibited 1990‟s-women were given responsible status in social structure. 2001- India saw progress in women empowerment. 2010 onwards- 1\3 rd seats were reserve for women in parliament. Even with such a progress India has to go a long way to witness complete empowerment of women. India has to face certain challenges in future in the process of achieving women empowerment. India being a land of rich culture and tradition, it is difficult to change the mind set of people on certain aspects of women in the field of education, work, social status, political status etc... Though government have taken a strong initiative to educate a girl child in the country, most of the community in India are still believing that education is not a primary aspect of girl instead the primary duty is to get marry and be a good wife and a caring member in the family. She is not meant for taking tough task of taking decision in the family. This is why we see only 54.16% of literacy rate among women

When it comes to women participation in labour force, it is more challenging task, A New York Times op-ed, published in 2015, tried explaining this absence of women from India's work force. "Much of the reason they don't work appears to lie in the persistence of India's traditional gender norms, which seeks to ensure "purity" of women by protecting them from men other than their husband and restrict mobility outside their homes." The movie like Dongle is the best example of how countries like India as to face challenges in empowering women due to a narrowest view of people in our community. We the people in India decide whom the girl should marry? What should she wear? How should she talk? Where should she work? How much education does she need? Etc... all this is the future challenges for women empowerment in India.

## CONCLUSION :

"Women is an incarnation of shakti- the goddess of power. If she is bestowed with education, India's strength will double. Let the campaign of "kanya Kelavni" be spread in every home, let the lamp of educating daughter be lit up in every heart" – Sri Narendra Modi. A woman is a mother of race and liaison between generations. The women have come a long way. The gender gap in infant mortality rate has narrowed, enrolment of girls in schools has improved and participation of women in the organized sector has taken a quantum jump. But still in India we can see a drawback of people outlook towards women due to our strong tradition and beliefs that were in practice since many generation. The policies of the government towards women empowerment are very effective but their implementations are ineffective. The women empowerment is possible only if the mindset of the people are changed towards the women issues.

# ಸುಸ್ತಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-11)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-11)



– ಶ್ರೀ ಯಶವಂತ ಡೋಂಗ್ರೆ

### ಎಸ್‌ಡಿಜಿ 11 : ಸುಸ್ಥಿರ ನಗರಗಳು ಮತ್ತು ಸಮುದಾಯಗಳು

ನಗರಗಳು ಮತ್ತು ಮನುಷ್ಯರು ವಾಸವಿರುವ ಎಲ್ಲ ಪ್ರದೇಶಗಳೂ, ಸುರಕ್ಷಿತ, ಸ್ಥಿತಿಸ್ಥಾಪಕ, ಎಲ್ಲರನ್ನು ಒಳಗೊಂಡ ಮತ್ತು ಸುಸ್ಥಿರವಾಗಿರುವಂತೆ ಮಾಡುವುದು (Make cities and human settlements inclusive, safe, resilient and sustainable) ಸುಸ್ಥಿರ ಅಭಿವೃದ್ಧಿ ಸಾಧನೆಗೆ ಒಂದು ಪ್ರಮುಖ ಅಗತ್ಯವಾಗಿದೆ. ಇತ್ತೀಚಿನ ಕೆಲವು ದಶಕಗಳಲ್ಲಿ ನಗರಗಳಲ್ಲಿನ ಜನಸಂಖ್ಯೆ ಅಗಾಧವಾಗಿ ಬೆಳೆದಿದೆ. ನಗರಗಳಲ್ಲಿರುವ ಕೈಗಾರಿಕೆಗಳು ಮತ್ತು ಕಛೇರಿಗಳು, ಶಿಕ್ಷಣ ಸಂಸ್ಥೆಗಳು ಮತ್ತು ಇತರೆ ಸಾರ್ವಜನಿಕ ಸೇವೆಗಳು ಸಹಜವಾಗಿಯೇ ಹೆಚ್ಚಿನ ಜನರಿಗೆ ನಗರ ಪ್ರದೇಶಗಳಿಗೆ ವಲಸೆ ಹೋಗುವಂತೆ ಮಾಡಿದೆ. ಇದರಿಂದಾಗಿ ಒಂದೆಡೆ ನಗರಗಳು ಬೆಳೆಯುತ್ತಿದ್ದರೆ, ಇನ್ನೊಂದೆಡೆ ನಗರವಾಸಿಗಳು ವಿವಿಧ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಆದುದರಿಂದ ಸುಸ್ಥಿರ ಅಭಿವೃದ್ಧಿಯ ಈ ಗುರಿಯಲ್ಲಿ ನಗರಗಳಲ್ಲಿನ ಸಮಸ್ಯೆಗಳನ್ನು ಕಡಿಮೆ ಮಾಡುವಕಡೆಗೆ ಗಮನ ಹರಿಸಲಾಗಿದೆ. 2030ರೊಳಗೆ ಎಲ್ಲ ನಗರವಾಸಿಗಳಿಗೂ ಸಮರ್ಪಕ, ಸುರಕ್ಷಿತ ಮತ್ತು ಕೈಗೆಟುಕುವ ವಸತಿ ಮತ್ತು ಇತರೆ ಮೂಲಸೌಕರ್ಯಗಳು ದೊರೆಯುವಂತೆ ಮಾಡಬೇಕೆಂದು ಈ ಗುರಿಯಲ್ಲಿ ತಿಳಿಸಲಾಗಿದೆ. ಸಾರ್ವಜನಿಕ ಸಾರಿಗೆಯನ್ನು ವಿಸ್ತರಿಸಿ ಅದು ಸುರಕ್ಷಿತವಾಗಿರುವಂತೆ ಮತ್ತು ಎಲ್ಲ ವರ್ಗದ ಜನರಿಗೂ ದೊರೆಯುವಂತೆ ಮಾಡುವುದು ಮತ್ತು ನಗರಗಳ ಎಲ್ಲ ಭಾಗಗಳಲ್ಲಿ ಉತ್ತಮ ಗುಣಮಟ್ಟದ ಮತ್ತು ಸುರಕ್ಷಿತ ರಸ್ತೆಗಳು, ಒಳಚರಂಡಿ, ಕುಡಿಯುವ ನೀರಿನ ಸೌಲಭ್ಯ ಮುಂತಾದುವುಗಳನ್ನು ಒದಗಿಸುವ ಮೂಲಕ ಎಲ್ಲ ದೇಶಗಳ ಎಲ್ಲ ನಗರಗಳಲ್ಲಿಯೂ ಒಟ್ಟಾರೆ ನಗರ ಗುಣಮಟ್ಟವನ್ನು ಹೆಚ್ಚಿಸಿ ಸುಸ್ಥಿರ ನಗರೀಕರಣದವನ್ನು ಸಾಧಿಸಬೇಕೆಂದು ಈ ಗುರಿಯು ಬಯಸುತ್ತದೆ.

ನಗರಗಳು ಬೆಳೆದಂತೆಲ್ಲ ಸುತ್ತಮುತ್ತಲಿನ ಸ್ಥಳವನ್ನೆಲ್ಲ ಆಕ್ರಮಿಸುವ ಭರಾಟೆಯಲ್ಲಿ ಆಗುವ ನಾಶವನ್ನು ಮನಗಂಡು, ವಿಶ್ವದ ಎಲ್ಲೆಡೆ ಸ್ಥಳೀಯ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯನ್ನು ರಕ್ಷಿಸುವ ಪ್ರಯತ್ನಗಳನ್ನು ಮಾಡಬೇಕೆಂದು ಈ ಗುರಿಯು ವಿಧಿಸುತ್ತದೆ. ನಗರಗಳಲ್ಲಿನ ಗಾಳಿಯ ಗುಣಮಟ್ಟ ಕಾಪಾಡುವುದು, ತ್ಯಾಜ್ಯ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಕೈಗೊಳ್ಳುವುದು, ಎಲ್ಲ ಸಾರ್ವಜನಿಕ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವುದು ಮತ್ತು ಈ ಪ್ರದೇಶಗಳಿಗೆ ಎಲ್ಲ ಜನರಿಗೆ ಮುಕ್ತ ಪ್ರವೇಶ ಸಾಧ್ಯವಾಗುವಂತೆ ಮಾಡುವುದು, ರಾಷ್ಟ್ರೀಯ ಮತ್ತು ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ಬಲಪಡಿಸುವ ಮೂಲಕ ನಗರಗಳು ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಸಕಾರಾತ್ಮಕ ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಸಂಪರ್ಕಗಳನ್ನು ಸಾಧ್ಯವಾಗಿಸುವುದು, ಎಲ್ಲ ನಗರಗಳೂ ಎಲ್ಲ ಬಗೆಯ ವಿಪತ್ತುಗಳನ್ನೂ ಎದುರಿಸಲು ಸಜ್ಜಾಗುವಂತೆ ಮಾಡುವುದು, ಮತ್ತು ಸ್ಥಳೀಯ ವಸ್ತುಗಳನ್ನು ಬಳಸಿಕೊಂಡು ಉತ್ತಮ ಗುಣಮಟ್ಟದ ಕಟ್ಟಡ ಮತ್ತಿತ್ಯಾದಿ ಮೂಲ ಸೌಕರ್ಯಗಳನ್ನು ನಿರ್ಮಿಸುವುದರ ಮೂಲಕ ಸುಸ್ಥಿರ ನಗರೀಕರಣವನ್ನು ಸಾಧ್ಯವಾಗಿಸುವುದು ಇವುಗಳಿಗೆಲ್ಲ ನಿರ್ದಿಷ್ಟ ಗುರಿಗಳನ್ನು ನಿಗದಿಪಡಿಸುವ ಎಸ್‌ಡಿಜಿ 11ರ ಮೂಲಕ ನಗರಗಳ ಸುಸ್ಥಿರ ಅಭಿವೃದ್ಧಿಯತ್ತ ಜಗತ್ತಿನ ಗಮನ ಸೆಳೆಯುವ ಪ್ರಯತ್ನಮಾಡಲಾಗಿದೆ.

### ಸಹಕಾರಿ ಸಂಸ್ಥೆಗಳ ಪಾತ್ರ :

ನಾವೆಲ್ಲರೂ ಕಾಣುತ್ತಿರುವಂತೆ ನಗರೀಕರಣವು ಅತಿ ವೇಗದಲ್ಲಿ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ. ನಗರಗಳಿಗೆ ಜನರು ವಲಸೆಬರುವುದು ಮತ್ತು ನಗರಗಳಲ್ಲಿ ವಸತಿ ಪಡೆಯುತ್ತಿರುವ ವೇಗಕ್ಕೆ ಹೋಲಿಸಿದಾಗ ಇತರೆ ಮೂಲಭೂತ ಸೌಕರ್ಯಗಳು ಬೆಳೆಯುವ ವೇಗ ಕಡಿಮೆಯಾಗಿದೆ. ಹೀಗಾಗಿ ನಗರಗಳಲ್ಲಿ ಕೊಳೆಗೇರಿಗಳು, ಜನನಿಬಿಡತೆ, ವಾಯು ಮತ್ತು ಶಬ್ದ ಮಾಲಿನ್ಯ, ನೀರು, ವಿದ್ಯುಚ್ಛಕ್ತಿ ಮುಂತಾದ ಅಗತ್ಯಗಳ ಅಸಮರ್ಪಕ ಲಭ್ಯತೆ ಮುಂತಾದ ಸಮಸ್ಯೆಗಳು ಹೆಚ್ಚಾಗುತ್ತಿವೆ. 2014ರಲ್ಲಿ ನಡೆದ ಜಾಗತಿಕ ಸಮೀಕ್ಷೆಯೊಂದರ ಪ್ರಕಾರ ಜಗತ್ತಿನಾದ್ಯಂತ ಸುಮಾರು 880 ದಶಲಕ್ಷ ಜನ ನಗರಗಳಲ್ಲಿ ಕೊಳೆಗೇರಿಗೆ ಸಮಾನ ಪರಿಸರದಲ್ಲಿ ಬದುಕುತ್ತಿದ್ದಾರೆ ಮತ್ತು ಪ್ರತಿ ಹತ್ತಿರಲ್ಲಿ ಒಂಭತ್ತು ಜನ ಜಾಗತಿಕ ಆರೋಗ್ಯ ಸಂಸ್ಥೆ ಸೂಚಿಸಿರುವ ಗುಣಮಟ್ಟ ಪರಿಮಾಣಕ್ಕಿಂತ ಕಡಿಮೆ ಗುಣಮಟ್ಟದ ಗಾಳಿಯನ್ನು ಸೇವಿಸುತ್ತಿದ್ದಾರೆ. ನಗರಗಳ ಜನಸಂಖ್ಯೆಯ ಸುಮಾರು ಸರಾಸರಿ ಶೇಕಡ 30ರಷ್ಟು ಜನರಿಗೆ ಮೂಲಭೂತ ಸೌಕರ್ಯಗಳು ಸೂಕ್ತವಾಗಿ ದೊರೆಯುತ್ತಿಲ್ಲವೆಂದೂ ಅಧ್ಯಯನಗಳು ತಿಳಿಸಿವೆ.

ನಗರಗಳಲ್ಲಿನ ಮೂಲಭೂತ ಸೌಕರ್ಯಗಳ ಮುಖ್ಯ ಸಮಸ್ಯೆ ಎಂದರೆ ಅವುಗಳನ್ನು ಜನರಿಗೆ ತಲುಪಿಸುವ ವಿತರಕ ಸಂಸ್ಥೆಗಳ ವ್ಯವಸ್ಥಾಪನೆ. ಈ ಸಂಸ್ಥೆಗಳು ಬಹುತೇಕ ಸರಕಾರೀ ಸ್ವಾಮ್ಯದಲ್ಲಿ ಇಲ್ಲವೆ ಖಾಸಗಿ ಒಡೆತನದಲ್ಲಿರುವುದರಿಂದ, ವಿವಿಧ ಸೇವೆಗಳನ್ನು ಪಡೆಯುವ ಜನರ ಭಾಗವಹಿಸುವಿಕೆ ಇರುವುದಿಲ್ಲ. ಹೀಗಾಗಿಯೇ ವಿತರಕ ಸಂಸ್ಥೆಗಳಿಗೆ ಜನರ ಅಗತ್ಯಗಳು ಮತ್ತು ಸೇವೆ ಪಡೆಯುವ ಸಾಮರ್ಥ್ಯದ ಬಗ್ಗೆ ಪೂರ್ಣ ಅರಿವಿರುವುದಿಲ್ಲ. ಆದುದರಿಂದ ಜನರು ನೇರವಾಗಿ ಭಾಗವಹಿಸುವ ಸಂಸ್ಥೆಗಳು ನಾಗರೀಕ ಸೇವೆಗಳನ್ನು ನೀಡುವುದು ಒಳ್ಳೆಯದು ಎಂಬುದು ಬಹುತೇಕ ತಜ್ಞರ ಅಭಿಪ್ರಾಯವಾಗಿದೆ. ಆದುದರಿಂದ ಸಹಜವಾಗಿಯೇ ಈ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ಮುನ್ನೆಲೆಗೆ ಬರುತ್ತದೆ.

ವಿವಿಧ ರೀತಿಯಲ್ಲಿ ನಗರಗಳನ್ನು ಸುಸ್ಥಿರಗೊಳಿಸುವ ಕೆಲಸದಲ್ಲಿ ನಿರತವಾಗಿರುವ ಸಹಕಾರಿ ಸಂಘಗಳ ಹಲವಾರು ಉದಾಹರಣೆಗಳನ್ನು ಜಗತ್ತಿನಾದ್ಯಂತ ಕಾಣಬಹುದು. ಹೈಟಿ ದೇಶದ ರಾಜಧಾನಿಯಾದ ಪೋರ್ಟ್ ಔ ಪ್ರಿನ್ಸ್, 2010ರಲ್ಲಿನ ಭೀಕರ ಭೂಕಂಪದಿಂದಾಗಿ ದೊಡ್ಡ ಮಟ್ಟದಲ್ಲಿ ಮನೆಗಳು ಮತ್ತು ಇತರೆ ಕಟ್ಟಡಗಳನ್ನು ಕಳೆದುಕೊಂಡಿತು. ಸುಮಾರು ಹದಿನೈದು ಲಕ್ಷ ಜನ ಮನೆ ಮಠ ಕಳೆದುಕೊಂಡರು. ಈ ಸಂದರ್ಭದಲ್ಲಿ ಸುಮಾರು ನೂರು ಜನ ನಾಗರೀಕರು ಸೇರಿ 2011ರಲ್ಲಿ ದಕ್ಷಿಣ-ಪೂರ್ವ ಹೈಟಿ ವಸತಿ ಮತ್ತು ಸಣ್ಣ ವ್ಯವಹಾರ ಪತ್ತಿನ ಸಹಕಾರಿ ಸಂಘವನ್ನು ಸ್ಥಾಪಿಸಿದರು. ಈ ಸಹಕಾರಿ ಸಂಘದಿಂದಾಗಿ ಆ ಪ್ರದೇಶದ ಜನರಿಗೆ ಉತ್ತಮ ವಸತಿ ಸೌಕರ್ಯ ಕಲ್ಪಿಸುವುದು ಸಾಧ್ಯವಾಗಿ, ದೇಶದಲ್ಲಿ ಇಂತಹುದೇ ಹಲವು ಸಹಕಾರಿ ಮಾದರಿಗಳು ಹುಟ್ಟಿಕೊಳ್ಳುವಂತಾಯ್ತು. ಜೊತೆಗೆ ಎಲ್ಲರಿಗೆ ಉತ್ತಮ ಗುಣಮಟ್ಟದ, ಭೂಕಂಪ ನಿರೋಧಕ ಮನೆಗಳನ್ನು ನಿರ್ಮಿಸಿಕೊಳ್ಳುವುದೂ ಸಾಧ್ಯವಾಯಿತು. ಕೀನ್ಯಾ ದೇಶದಲ್ಲಿ ನಗರಗಳಲ್ಲಿರುವ ಬಡ ಸಮುದಾಯಗಳಿಗೆ ಉತ್ತಮ ವಸತಿ ಸೌಕರ್ಯ ಒದಗಿಸುವುದಕ್ಕಾಗಿಯೇ 1979ರಲ್ಲಿ ರಾಷ್ಟ್ರೀಯ ವಸತಿ ಸಹಕಾರಿ

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 30
Licensed to post without Prepayment License No. PMG BG/WPP-384/2020-2022.



ಸಂಘವನ್ನು ಸ್ಥಾಪಿಸಲಾಯ್ತು. ಇದರಿಂದಾಗಿ ವಸತಿ ಇಲ್ಲದೆ ಕೊಳಗೇರಿಗಳಲ್ಲಿ ವಾಸಿಸುವಂತಾಗಿದ್ದ ಸಹಸ್ರಾರು ಬಡ ಮತ್ತು ಕಳೆವರ್ಗದ ಕುಟುಂಬಗಳಿಗೆ ಉತ್ತಮ ಮತ್ತು ಎಲ್ಲ ಮೂಲಭೂತ ಸೌಕರ್ಯಗಳುಳ್ಳ ಮನೆಗಳನ್ನು ಹೊಂದುವುದು ಸಾಧ್ಯವಾಯಿತು. ಈಚಿನ ವರ್ಷಗಳಲ್ಲಿ ಈ ಸಹಕಾರಿ ಸಂಘಟನೆಯು ಕೇವಲ ವಸತಿ ಸೌಕರ್ಯವಷ್ಟೇ ಅಲ್ಲದೆ, ಇತರೆ ಹಲವಾರು ಸಮುದಾಯ ಸೇವೆಗಳನ್ನು ಒದಗಿಸುತ್ತ, ನಗರ ಜೀವನವು ಸುಗಮವಾಗುವಂತೆ ಮಾಡಿದೆ. ಇಟಲಿಯಲ್ಲಿ ಸುಮಾರು 400 ಕ್ಕೂ ಹೆಚ್ಚು ಸಾಮಾಜಿಕ ಸಹಕಾರಿ ಸಂಘಗಳು (ಸೋಶಿಯಲ್ ಕೋಆಪರೇಟಿವ್ಸ್) ನಗರ ನೈರ್ಮಲ್ಯ ಚಟುವಟಿಕೆಗಳನ್ನು ನಡೆಸುತ್ತಿವೆ. ಸ್ಥಳೀಯ ನಗರ ಸಭೆ ಮತ್ತು ನಗರ ಪಂಚಾಯತುಗಳ ವ್ಯಾಪ್ತಿಯಲ್ಲಿ ತ್ಯಾಜ್ಯ ಸಂಗ್ರಹ, ವಿಲೇವಾರಿ ಮತ್ತು ಸಂಸ್ಕರಣೆಯನ್ನು ಈ ಸಹಕಾರಿ ಸಂಘಟನೆಗಳು ನಿರ್ವಹಿಸುತ್ತಿವೆ. ಸಹಕಾರಿ ಸಂಘಗಳು ಈ ಸೇವೆಗಳನ್ನು ಜನರ ಸಹಭಾಗಿತ್ವದಲ್ಲಿ ನೀಡುತ್ತಿರುವುದರಿಂದ ಜನರ ಅಗತ್ಯಗಳನುಸಾರ ಸೇವೆಗಳನ್ನು ಒದಗಿಸುವುದು ಸಾಧ್ಯವಾಗಿದೆ. ಬ್ರೆಝಿಲ್ ನ ರೆಡೆಸೋಲ್ ಸಹಕಾರಿ ಸಂಘವೂ ಹೀಗೆಯೇ ಇಡೀ ನಗರದ ಕಸ ವಿಲೇವಾರಿಯ ವ್ಯವಸ್ಥಾಪನೆಯನ್ನು ಉತಮವಾಗಿ ನಡೆಸುತ್ತಿದೆ. ಹೀಗೆಯೇ ಅಮೆರಿಕದ ಪಿಟ್ಸ್‌ಫೀಲ್ಡ್ ನಗರದಲ್ಲಿರುವ ರೋಸ್ ಅಂಡ್ ಕೋಲ್ಸ್ ಸಹಕಾರಿ ಸಾರಿಗೆ ನಗರವಾಸಿಗಳಿಗೆ ಹಂಚಿಕೆ ಅಧಾರದಲ್ಲಿ ಪ್ರಯಾಣ ಸೌಕರ್ಯ ಒದಗಿಸುತ್ತಿದೆ.

ನಗರ ಪ್ರದೇಶಗಳಲ್ಲಿ ನಾಗರೀಕ ಸೇವೆಗಳನ್ನು ಒದಗಿಸುತ್ತಿರುವ ಸಹಕಾರಿ ಸಂಘಗಳನ್ನು ನಮ್ಮ ದೇಶದಲ್ಲಿಯೂ ನೋಡಬಹುದಾಗಿದೆ. ಉದಾಹರಣೆಗೆ ಮಹಾರಾಷ್ಟ್ರದ ಪುಣೆ ನಗರದಲ್ಲಿರುವ 'ಸ್ವಚ್' ಗೃಹ ತ್ಯಾಜ್ಯಗಳ ಸಂಸ್ಕರಣ ಮತ್ತು ವಿಲೇವಾರಿಯನ್ನು ನೋಡಿಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದುದಾಗಿದೆ. ಹೀಗೆಯೇ ದೆಹಲಿಯಲ್ಲಿರುವ ಮಹಿಳೆಯರ ಕಸ ವಿಲೇವಾರಿ ಸಹಕಾರಿ ಸಂಘವೂ ನಗರ ನೈರ್ಮಲ್ಯ ಚಟುವಟಿಕೆಯಲ್ಲಿ ನಿರತವಾಗಿದೆ. ದೆಹಲಿಯಲ್ಲಿ ನಿವೃತ್ತ ಸೈನಿಕರ ಸಹಕಾರಿಯು ಟ್ಯಾಕ್ಸಿ ಸೇವೆಯನ್ನು ಒದಗಿಸುತ್ತಿದ್ದರೆ, ಇತ್ತೀಚೆಗೆ ಕೇರಳದ ಕೊಚ್ಚಿ ನಗರದಲ್ಲಿ ನಗರ ಪ್ರಯಾಣವನ್ನು ನೋಡಿಕೊಳ್ಳಲು ಹಲವು ಖಾಸಗೀ ಬಸ್ ಮಾಲೀಕರು ಸೇರಿ ಕೊಚ್ಚಿ ಮೆಟ್ರೋ ನಗರ ಸಾರಿಗೆ ಸಹಕಾರಿ ಸಂಘವನ್ನು ಸ್ಥಾಪಿಸಿದ್ದಾರೆ. ಹೀಗಿದ್ದರೂ ನಮ್ಮ ದೇಶದಲ್ಲಿ ಇಂತಹ ಸಹಕಾರಿ ಸಂಘಗಳು ಸಂಖ್ಯೆ ಮತ್ತು ಸೇವೆಗಳ ವೈವಿಧ್ಯತೆಯ ದೃಷ್ಟಿಯಿಂದ ಬಹು ಕಡಿಮೆ ಎನ್ನಬಹುದು. ನಗರಗಳಲ್ಲಿ ನಾಗರೀಕ ಸೇವೆಗಳನ್ನು ಜನರು ತಾವೇ ನಡೆಸುವ ಸಂಸ್ಥೆಗಳಿಂದ ಪಡೆಯುವಂತಾದರೆ ಉತ್ತಮ ಗುಣಮಟ್ಟದ ಸೇವೆಗಳು ಲಭ್ಯವಾಗಿ ನಗರವಾಸಿಗಳ ಜೀವನ ಹೆಚ್ಚು ಹಸನಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಸಹಕಾರಿ ಸಂಘಟನೆಗಳು ಈ ಕೆಳಗಿನ ಕೆಲವು ಸಾಧ್ಯತೆಗಳನ್ನು ಪರಿಶೀಲಿಸಬಹುದು.

1. ಸಹಕಾರ ಮಹಾಮಂಡಳಗಳು ಸರಕಾರಕ್ಕೆ ಪ್ರಸ್ತಾಪಗಳನ್ನು ಸಲ್ಲಿಸಿ ಮತ್ತು ಸರಕಾರದ ಸಂಬಂಧಿತ ಇಲಾಖೆಗಳೊಂದಿಗೆ ಚರ್ಚಿಸಿ ಸರಕಾರ ಮತ್ತು ಖಾಸಗೀ ವಲಯಗಳಮೂಲಕ ಯಶಸ್ವಿಯಾಗಿ ನಡೆಯದಿರುವ ನಗರ ಸೌಲಭ್ಯಗಳನ್ನು ಸಹಕಾರಿ ಸಂಘಟನೆಗಳಿಗೆ ವಹಿಸುವಂತೆ ಮನವೊಲಿಸಬಹುದು.
2. ನಗರ ನೈರ್ಮಲ್ಯದ ವಿವಿಧ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿರುವ ಕಾರ್ಮಿಕರು ಸಂಘಟಿತರಾಗಿ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ವಿವಿಧ ನೈರ್ಮಲ್ಯ ಚಟುವಟಿಕೆಗಳನ್ನು ನಡೆಸುವಂತೆ ಮಾಡಬಹುದು.
3. ಈಗಾಗಲೇ ನಗರ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಿವಿಧೋದ್ದೇಶ ಮತ್ತು ಗ್ರಾಹಕ ಸಹಕಾರಿ ಸಂಘಗಳು, ನಾಗರೀಕ ಸೇವೆಗಳನ್ನು ಒದಗಿಸುವ ಮತ್ತು ನಿರ್ವಹಿಸುವ ಕೆಲಸಗಳಲ್ಲಿ ತೊಡಗಬಹುದು.
4. ಸಹಕಾರಿ ಸಂಘಗಳು ನಗರದ ಒಟ್ಟಾರೆ ನೈರ್ಮಲ್ಯ ಮತ್ತು ಜನಜೀವನವನ್ನು ಹಸನುಗೊಳಿಸುವ ಯಾವುದೇ ಯೋಜನೆಗಳಿಗೆ (ಉದಾಹರಣೆ ತ್ಯಾಜ್ಯದಿಂದ ಗೊಬ್ಬರ ತಯಾರಿಕೆ, ಮಳೆಕೊಯ್ಲು ವ್ಯವಸ್ಥೆ, ಸೌರ ವಿದ್ಯುತ್ ಘಟಕಗಳ ಸ್ಥಾಪನೆ, ನಗರ ಸಾರಿಗೆ ಒದಗಿಸುವುದು ಇತ್ಯಾದಿ) ಕಡಿಮೆ ಬಡ್ಡಿಯಲ್ಲಿ ಸಾಲ ನೀಡುವ ಯೋಜನೆಗಳನ್ನು ಆರಂಭಿಸಬಹುದು
5. ಗೃಹ ತ್ಯಾಜ್ಯದ ವರ್ಗೀಕರಣ, ವಿವಿಧ ವಸ್ತುಗಳ ಮರುಬಳಕೆ, ಬಳಸಿದ ವಸ್ತುಗಳ ನವೀಕರಣ, ವಾಹನಗಳನ್ನು ಹೊಂದಿದವರು ಶಬ್ದಮಾಲಿನ್ಯ ಮತ್ತು ಹೊಗೆ ಹೊರಸೂಸುವಿಕೆಗಳಂತಹ ವಿಷಯಗಳಬಗ್ಗೆ ಕಾಳಜಿ ವಹಿಸುವುದು ಮುಂತಾದುವುಗಳ ಕುರಿತಂತೆ ಸಹಕಾರಿ ಸಂಘಗಳು ಸದಸ್ಯರಲ್ಲಿ ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬಹುದು
6. ನಾಗರೀಕ ಸೌಲಭ್ಯಗಳು ಎಲ್ಲ ನಗರವಾಸಿಗಳಿಗೂ ಲಭ್ಯವಾಗುವಂತೆ ನೋಡಿಕೊಳ್ಳುವ ಸಂಬಂಧ ಸಹಕಾರಿ ಸಂಘಗಳು ಸದಸ್ಯರಿಗೆ ತಾಂತ್ರಿಕ ಸಹಾಯ ಮತ್ತು ಅವರುಗಳು ಸಂಬಂಧಿತ ಇಲಾಖೆಯೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುವುದು ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು
7. ಕಡಿಮೆ ಆದಾಯದ ಕುಟುಂಬಗಳು ಆರೋಗ್ಯಕರ ಮತ್ತು ಪರಿಸರ ಸ್ನೇಹಿ ಪರ್ಯಾಯ ಇಂಧನಗಳನ್ನು ಬಳಸುವುದು ಸಾಧ್ಯವಾಗುವಂತೆ ಅಂತಹ ಕುಟುಂಬಗಳಿಗೆ ಸೌರ ಘಟಕಗಳು ಮತ್ತು ಜೈವಿಕ ಇಂಧನದ ಯಂತ್ರಗಳನ್ನು ಕಂತುಗಳಲ್ಲಿ ಪಾವತಿಸುವ ಮಾದರಿಯಲ್ಲಿ ಒದಗಿಸಬಹುದು.
8. ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಸಹಕಾರಿ ಸಂಘಗಳು ಸುಸ್ಥಿರ ನಗರ ಸೌಲಭ್ಯಗಳನ್ನು ಒದಗಿಸುವ ಕುರಿತಂತೆ ವಿಚಾರ ಸಂಕಿರಣಗಳನ್ನು ನಡೆಸುವುದು, ಸಹಕಾರಿ ಸದಸ್ಯರಿಗೆ ನಾಗರೀಕ ಸೌಲಭ್ಯಗಳ ಕುರಿತಂತೆ ಜಾಗೃತಿ ಮೂಡಿಸುವುದು, ನಗರ ನೈರ್ಮಲ್ಯವನ್ನು ಆಗಾಗ್ಗೆ ಪರಿಶೀಲಿಸುವುದು ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು
9. ನಗರ ಸಾರಿಗೆ, ಒಳಚರಂಡಿ ವ್ಯವಸ್ಥಾಪನೆ, ಕಸ ವಿಲೇವಾರಿ, ನೀರು ಸರಬರಾಜಿನ ನಿರ್ವಹಣೆ ಮುಂತಾದ ಚಟುವಟಿಕೆಗಳನ್ನು ಹಂತ ಹಂತವಾಗಿ ಸಹಕಾರಿ ಸಂಸ್ಥೆಗಳ ಮೂಲಕ ಮಾಡುವ ಪ್ರಯತ್ನ ಮಾಡಬಹುದು.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010